**ತರಗತಿ IV**

**STANDARD IV**

# ಗಣಿತ

# MATHEMATICS

**ಭಾಗ – 1**

**PART - 1**

ಕೇರಳ ಸರಕಾರ
ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2015

JT 413-1/Maths-4 (K) (Vol-1)

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ,
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಚಲ ಜಲಧಿತರಂಗಾ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವ ಜಯ ಗಾಥಾ,
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ,
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶದ ಮತ್ತು ಜನತೆಯ ಕ್ಷೇಮ ಹಾಗೂ ಸಮೃದ್ಧಿಗಾಗಿ ಸದಾ ಪ್ರಯತ್ನಿಸುತ್ತೇನೆ.

*Prepared by* :
**State Council of Educational Research and Training (SCERT)**
Poojappura, Thiruvananthapuram 695 012, Kerala

*Website* : www.scertkerala.gov.in
*E-mail* : scertkerala@gmail.com
Phone : 0471-2341883, Fax : 0471-2341869
Typesetting and Layout : SCERT
Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ಮಕ್ಕಳೇ,

ಗಣಿತದ ಮೂಲಭೂತ ತಿಳುವಳಿಕೆಗಳಲ್ಲಿ ಹಲವನ್ನು ನಾವು ಗಳಿಸಿರುವೆವು. ಇನ್ನೂ ಅನೇಕ ವಿಚಾರಗಳನ್ನು ತಿಳಿಯಲಿಕ್ಕಿದೆ. ಆಡುತ್ತಾ, ನಲಿಯುತ್ತಾ, ಗಂಪಾಗಿ ಸೇರುತ್ತಾ, ಲೆಕ್ಕಾಚಾರಗಳನ್ನು ಮಾಡುತ್ತಾ, ಸಮಸ್ಯೆಗಳನ್ನು ಪರಿಹರಿಸುತ್ತಾ ಗಣಿತವನ್ನು ಕಲಿಯೋಣ.

ಆಲೋಚಿಸಿ, ಸಂಶೋಧನೆ ಮಾಡಿ, ಕಂಡುಹಿಡಿದು ಮುಂದಕ್ಕೆ ಸಾಗುವಾ.

**ಡಾ. ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ

# TEXT BOOK DEVELOPMENT TEAM PARTICIPANTS

**Suresh C.**
G.M.L.P.S. Cherumuk
Kozhikode

**Ashraf C.V.**
Vanimel M.U.P.S
Nadapuram, Vadagara

**Sasidharan V.P.**
BRC Irritti

**Prashanth K.P.**
Devadhar U.P.S
Nediyirupp, Malappuram

**Manikantan K.O.V.**
Pattiyamma A.U.P.S
Karivellur, Kannur

**Thulasidharan Pilla K.G**
Govt. U.P.S Charipparamba, Kollam

**Shajahan V.**
G.M.U.P.S. Melmuri
Malappuram

**Jabir K.**
G.H.S. Adoor
Kasaragod

**Muhammed Nazar**
G.H.S. Kodvayur
Palakkad

**Unnikrishnan V.T.**
Ponnani Girls H.S.S
Malappuram

## Artist
**Harikumar**

## Cover
**Rakesh P. Nair**

## Experts

**Dr. Radhakrishnan Chettiyar**
Rtd. Prof. University College
Thiruvananthapuram

**Dr. E. Krishnan**
Rtd. Prof. University College
Thiruvananthapuram

**Dr. Ramesh Kumar**
Asst. Prof. Kerala University
Karyavattam Thiruvananthapuram

**C.Venugopal**
Asst. Prof. College of Teacher Education
Thiruvananthapuram

## Kannada Version

**Prapullachandra C.H.**
HSA, GHSS Adoor.

**Ananthakrishna M.**
HM GJBS Peral.

**Yoosuf K.**
Trainer, BRC, Kumbla

**Sudhama K.**
PD Teacher, GHSS Adoor

## Experts

**Dr. Srikrishna Bhat**
Rtd. Professor, Govt. College, Kasaragod.

## Academic Co-ordinator
**Sujith Kumar G.,** Research Officer, SCERT, Thiruvananthapuram.

## Co-ordinator
**Dr. Faisal Mavulladathil,** Research Officer, SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ – 695 012



# ಅನುಕ್ರಮಣಿಕೆ


1 ನಾಲ್ಕಂಕೆ ಸಂಖ್ಯೆಗಳೊಂದಿಗೆ ................................ 7 - 24

2 ಸಮಯ ಚಕ್ರ ................................................ 25 - 40

3 ಸಾವಿರಗಳು ಸೇರುವಾಗ ................................... 41 - 54

4 ಹೆಚ್ಚು ಮತ್ತು ಕಡಿಮೆ ....................................... 55 - 64

5 ಆಕೃತಿಗಳನ್ನು ರಚಿಸೋಣ .................................. 65 - 78

## ಈ ಪುಸ್ತಕದಲ್ಲಿ ಅನುಕೂಲಕ್ಕಾಗಿ ಕೆಲವು ಸಂಕೇತಗಳನ್ನು ಉಪಯೋಗಿಸಲಾಗಿದೆ



ಹೆಚ್ಚಿನ ಚಟುವಟಿಕೆ/ ಮುಂದುವರಿದ ಚಟುವಟಿಕೆ



ನಾನು ಕಂಡುಕೊಂಡ ವಿಧಾನ




ಸಹಪಾಠಿಗಳು ಕಂಡುಕೊಂಡ ವಿಧಾನ



ಮೌಲ್ಯನಿರ್ಣಯ



ಐ.ಸಿ.ಟಿ. ಸಾಧ್ಯತೆಗಳು




ಪ್ರೊಜೆಕ್ಟ್

# 1

# ನಾಲ್ಕಂಕೆ ಸಂಖ್ಯೆಗಳೊಂದಿಗೆ

## ಶಾಲೆಯ ಕಡೆಗೆ

ಬೇಸಿಗೆ ರಜೆ ಮುಗಿದು ಶಾಲೆ ಪುನರಾರಂಭವಾಗಲು ಸಮಯವಾಯಿತು. ರೀನ ಮತ್ತು ತಂದೆ ಸಾಮಗ್ರಿಗಳನ್ನು ಖರೀದಿಸಲು ಶಾಲಾ ಬಜಾರ್‌ಗೆ ತಲುಪಿದರು.




- 250 ರೂಪಾಯಿ ಬೆಲೆಯಿರುವ ಒಂದು ಕೊಡೆಯನ್ನೂ 10 ರೂಪಾಯಿಯಂತೆ ಬೆಲೆಯಿರುವ 5 ನೋಟು ಪುಸ್ತಕಗಳನ್ನೂ 700 ರೂಪಾಯಿ ಬೆಲೆಯಿರುವ ಉಡುಪನ್ನೂ ಖರೀದಿಸಿದರು.

? ಒಟ್ಟು ಎಷ್ಟು ಹಣವಾಯಿತು?

? ತಂದೆಯ ಕೈಯಲ್ಲಿರುವುದೆಲ್ಲಾ 100 ರೂಪಾಯಿಯ ನೋಟುಗಳಾದರೆ ಎಷ್ಟು ನೋಟುಗಳನ್ನು ಕೊಡಬೇಕು?

? 500 ರೂಪಾಯಿಯ ನೋಟುಗಳಾದರೆ ಎಷ್ಟು ನೋಟುಗಳನ್ನು ಕೊಡಬೇಕು? [ ]

? 1000 ರೂಪಾಯಿಯ ನೋಟುಗಳು ಮಾತ್ರ ಕೈಯಲ್ಲಿರುವುದಾದರೋ? [ ]

ರೀನಳಿಗೆ 500 ರೂಪಾಯಿ ಬೆಲೆಯಿರುವ ಒಂದು ಬ್ಯಾಗನ್ನು ಖರೀದಿಸಿದರು.





? ಅಂಗಡಿಯಲ್ಲಿ ಒಟ್ಟು ಎಷ್ಟು ಹಣವನ್ನು ಕೊಡಬೇಕು? [ ]

? ಅಂಗಡಿಯಲ್ಲಿ ನೀಡಿದುದು 1000 ರೂಪಾಯಿಯ ಮತ್ತು 100 ರೂಪಾಯಿಯ ನೋಟುಗಳಾದರೆ ಪ್ರತಿಯೊಂದು ನೋಟುಗಳ ಸಂಖ್ಯೆ ಎಷ್ಟಾಗಿರಬಹುದು?

1000 ರೂಪಾಯಿಯ ನೋಟುಗಳ ಸಂಖ್ಯೆ [ ]

100 ರೂಪಾಯಿ ನೋಟುಗಳ ಸಂಖ್ಯೆ [ ]

## ಚಿಲ್ಲರೆ ಮಾಡಿದಾಗ




### ಎಷ್ಟು ರೀತಿ?

1000 → ............ಒಂದುಗಳು

1000 → ...........ನೂರುಗಳು

1000 → ..........ಹತ್ತುಗಳು

## ಬೀಜಗಳೆಷ್ಟು?

**ಪಾಲಕುನ್ನು ಯು.ಪಿ. ಶಾಲೆ**

**ನೋಟೀಸ್ ಬೋರ್ಡ್**

ಕೃಷಿ ಕ್ಲಬ್ಬಿನ ವತಿಯಿಂದ ಪರಿಸರ ದಿನವಾದ ಜೂನ್ *5* ರಂದು ಕ್ಲಬ್ಬಿನ ಸದಸ್ಯರಿಗೆ ತರಕಾರಿ ಬೀಜದ ವಿತರಣೆ ನಡೆಸುವರು.

- ಪ್ರತಿಯೊಂದರಲ್ಲಿ 100 ಬೀಜಗಳಿರುವ ಹತ್ತು ಪ್ಯಾಕೆಟುಗಳಾಗಿ ಮಾಡಿ ತಂದರು.

? ಒಟ್ಟು ಬೀಜಗಳು ಎಷ್ಟು?

ಈ ಬೀಜಗಳನ್ನು ಸಣ್ಣ ಪ್ಯಾಕೆಟುಗಳಲ್ಲಿ ಹಾಕಿ ಕ್ಲಬ್ಬಿನ 100 ಮಕ್ಕಳಿಗೆ ಸಮಾನವಾಗಿ ವಿತರಣೆ ಮಾಡಬೇಕು.

? ಪ್ರತಿಯೊಂದು ಸಣ್ಣ ಪ್ಯಾಕೆಟಿನಲ್ಲಿ ಎಷ್ಟು ಬೀಜಗಳಿರಬಹುದು?

**ನಾನು ಕಂಡುಕೊಂಡ ವಿಧಾನ**







## ಗೆಳತಿಗೆ ಸಹಾಯಮಾಡುವ

- ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗೆಳತಿಗೆ ಸಹಾಯ ಮಾಡಬೇಕು. ಪ್ರತಿಯೊಂದು ಕ್ಲಾಸಿನಿಂದಲೂ 1000 ರೂಪಾಯಿಯಂತೆ ಸಂಗ್ರಹಿಸಬೇಕು. ಹಣವನ್ನು ಸಂಗ್ರಹಿಸಿದ ವಿವರಗಳನ್ನು ಪಟ್ಟಿಯಲ್ಲಿ ನೋಡಿರಿ. ಪ್ರತಿಯೊಂದು ಕ್ಲಾಸಿನವರು 4 ನೇ ದಿನ ಸಂಗ್ರಹಿಸಬೇಕಾದ ಹಣವನ್ನು ಬರೆದು ಪಟ್ಟಿಯನ್ನು ಪೂರ್ತಿಗೊಳಿಸಿರಿ.


| ಕ್ಲಾಸು | ಒಂದನೇ ದಿನ | ಎರಡನೇ ದಿನ | ಮೂರನೇ ದಿನ | ಒಟ್ಟು | ಪ್ರತಿಯೊಂದು ಕ್ಲಾಸು ನಾಲ್ಕನೇ ದಿನ ಸಂಗ್ರಹಿಸಬೇಕಾದ ಹಣ |
|---|---|---|---|---|---|
| IV A | 310 | 490 | 100 | | |
| IV B | 400 | 490 | 100 | | |
| IV C | 410 | 290 | 250 | | |
| IV D | 410 | 490 | 99 | | |

## ಸಾವಿರದೊಂದಿಗೆ ಸಾವಿರ ಸೇರಿದರೆ




ನಾಲ್ಕೂ ಕ್ಲಾಸುಗಳು ಲೀಡರುಗಳು ಅವರು ಸಂಗ್ರಹಿಸಿದ ಮೊತ್ತವನ್ನು ಮುಖ್ಯೋಪಾಧ್ಯಾಯರಿಗೆ ನೀಡಿದರು.

ಒಟ್ಟು ಎಷ್ಟು ಹಣವನ್ನು ಸಂಗ್ರಹಿಸಿದರೆಂದು ನೋಡೋಣ.




? IV A ಮತು IV B ಸೇರಿ ಎಷ್ಟು ಹಣವನ್ನು ನೀಡಿರುವರು? [ ]

? IV C ಯ ಮಕ್ಕಳು ನೀಡಿದ ಮೊತ್ತವನ್ನು ಕೂಡಿಸಿದರೆ ಒಟ್ಟು ಎಷ್ಟು ಹಣವಾಯಿತು? [ ]

? IV D ಯ ಹಣವನ್ನು ಸೇರಿಸಿದರೋ? [ ]

? ನಾಲ್ಕೂ ಕ್ಲಾಸುಗಳಿಂದ ಸಿಕ್ಕಿದ ಒಟ್ಟು ಹಣವೆಷ್ಟು? [ ]

$$1000 + 1000 + 1000 + 1000 = 4000$$

ನಾಲ್ಕು ಸಾವಿರಗಳು ಸೇರಿದಾಗ ನಾಲ್ಕು ಸಾವಿರ.

ಹತ್ತು ಸಾವಿರಗಳು ಸೇರಿದರೋ? [ ]

**ಪೂರ್ತಿಗೊಳಿಸಬಹುದೇ?**

1000, 2000, .........., .........., 5000

9000, 8000, .........., .........., 5000

## ಸಾವಿರ ಲಭಿಸಲು

| | | |
|---|---|---|
| 850 + ...... | 925 + ...... | 800 + ...... |
| | 1000 | |
| 999 + ...... | ...... + 5 | ...... + ...... |

ಇನ್ನು ಸಾವಿರವನ್ನು ಮೂರು ಸಂಖ್ಯೆಗಳ ಮೊತ್ತವಾಗಿ ವಿಭಿನ್ನ ರೀತಿಗಳಲ್ಲಿ ಬರೆದು ನೋಡಿರಿ.

| | | | | | | |
|---|---|---|---|---|---|---|
| 1000 | = | 850 | + | 100 | + | 50 |
| 1000 | = | 925 | + | 50 | + | |
| 1000 | = | 800 | + | | + | |
| 1000 | = | | + | | + | |

## ಮಕ್ಕಳ ಉಳಿತಾಯ

- ನಿಮಗೆ ಉಳಿತಾಯ ಮಾಡುವ ಹವ್ಯಾಸ ಇದೆಯೇ?

ರೀನ ಮತ್ತು ಸಹಪಾಠಿಗಳು ಪ್ರತಿ ತಿಂಗಳು ಬ್ಯಾಂಕಿನಲ್ಲಿ ಹಣವನ್ನು ನಿಕ್ಷೇಪಿಸುವರು. ಕಳೆದ ಸಪ್ಟೆಂಬರಿನಿಂದ ಮಾರ್ಚ್ ತಿಂಗಳವರೆಗೆ ರೀನ ನಿಕ್ಷೇಪಿಸಿದುದನ್ನು ನೋಡಿರಿ.

ಪಟ್ಟಿಯನ್ನು ಪೂರ್ತಿಗೊಳಿಸುವಿರಲ್ಲವೇ?

| ತಿಂಗಳು | ನಿಕ್ಷೇಪಿಸಿದ ಹಣ | ಒಟ್ಟು |
|---|---|---|
| ಸೆಪ್ಟೆಂಬರ್ | 50 | 50 |
| ಒಕ್ಟೋಬರ್ | 100 | 150 |
| ನವಂಬರ್ | 100 | 250 |
| ಡಿಸೆಂಬರ್ | 200 | 450 |
| ಜನವರಿ | 100 | ___ |
| ಫೆಬ್ರವರಿ | ___ | 750 |
| ಮಾರ್ಚ್ | 100 | ___ |

- ನಿಕ್ಷೇಪಿಸಿದ ಒಟ್ಟು ಹಣ
- ಅಂಕೆಗಳಲ್ಲಿ ______
- ಅಕ್ಷರಗಳಲ್ಲಿ ______

- ಬೇಸಿಗೆ ರಜೆ ಕಳೆದು ಶಾಲೆ ಪುನರಾರಂಭವಾಯಿತು. ಜೂನ್ ತಿಂಗಳಲ್ಲಿ ರೀನಳು 150 ರೂಪಾಯಿಯನ್ನು ನಿಕ್ಷೇಪಿಸಿದಳು.
  - ಇದುವರೆಗೆ ನಿಕ್ಷೇಪಿಸಿದ ಹಣ
  - ಅಂಕೆಗಳಲ್ಲಿ ______
  - ಅಕ್ಷರಗಳಲ್ಲಿ ______

## ನೂರುಗಳು ಸೇರಿದಾಗ

■ ಮನೋಜ್ ಜನವರಿಯಿಂದ ಆರಂಭಿಸಿ ಆರು ತಿಂಗಳುಗಳಲ್ಲಿ ಪ್ರತಿತಿಂಗಳು 100 ರೂಪಾಯಿಯಂತೆ ನಿಕ್ಷೇಪಿಸಿದನು. ನಿಕ್ಷೇಪಿಸಿದ ವಿವರಗಳಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ತಿಂಗಳು | ನಿಕ್ಷೇಪಿಸಿದ ಹಣ | ಒಟ್ಟು |
|---|---|---|
| ಹಿಂದಿನ ಬಾಕಿ | | 1000 |
| ಜನವರಿ | 100 | 1100 |
| ಫೆಬ್ರವರಿ | | |
| ಮಾರ್ಚ್ | | |
| ಏಪ್ರಿಲ್ | | |
| ಮೇ | | |
| ಜೂನ್ | | |

? ಜೂನ್ ತಿಂಗಳವರೆಗೆ ನಿಕ್ಷೇಪಿಸಿದ ಒಟ್ಟು ಹಣವೆಷ್ಟು?


ಅಂಕೆಗಳಲ್ಲಿ ☐

ಅಕ್ಷರಗಳಲ್ಲಿ ☐

? ಡಿಸೆಂಬರ್ ತಿಂಗಳವರೆಗೆ 100 ರೂಪಾಯಿಯಂತೆ ನಿಕ್ಷೇಪಿಸಿದರೆ ಒಟ್ಟು ಮೊತ್ತ ಎಷ್ಟಾಗುವುದು? ☐

## ಓಟ ಸ್ಪರ್ಧೆ

■ ನೂರು ಮೀಟರ್ ಓಟ ಸ್ಪರ್ಧೆಯಲ್ಲಿ ಭಾಗವಹಿಸುವ 6 ಮಂದಿ ಮಕ್ಕಳಿಗೆ 1000 ದಿಂದ ಆರಂಭಿಸಿ ಅನುಕ್ರಮವಾದ ನಂಬರುಗಳನ್ನು ನೀಡಲಾಗಿದೆ. ಅವುಗಳನ್ನು ಕ್ರಮವಾಗಿ ಬರೆಯಿರಿ.



? ಸ್ಪರ್ಧೆಯಲ್ಲಿ ಭಾಗವಹಿಸುವ ಇನ್ನು 5 ಮಂದಿ ಮಕ್ಕಳಿಗೆ ಅನುಕ್ರಮವಾದ ನಂಬರುಗಳನ್ನು ನೀಡಬೇಕು. ಅವುಗಳನ್ನು ಬರೆಯಿರಿ.

☐ ☐ 1008 ☐ ☐

## ಹುಟ್ಟುಹಬ್ಬಕ್ಕೆ ಪುಸ್ತಕ

ರಾಮಪುರ ಎಲ್.ಪಿ. ಶಾಲೆಯ ವಿದ್ಯಾರ್ಥಿಗಳು ಅವರ ಹುಟ್ಟುಹಬ್ಬದ ಪ್ರಯುಕ್ತ ವಾಚನಾಲಯಕ್ಕೆ ಪುಸ್ತಕಗಳನ್ನು ನೀಡುತ್ತಾರೆ. ಈ ಹಿಂದೆ ವಾಚನಾಲಯದಲ್ಲಿ 1003 ಪುಸ್ತಕಗಳಿದ್ದುವು. ಜೂನ್ ತಿಂಗಳಿನಲ್ಲಿ ಒಂದನೇ ತರಗತಿಯಿಂದ ವಾಚನಾಲಯಕ್ಕೆ 3 ಪುಸ್ತಕಗಳು ಲಭಿಸಿದುವು.

? ಈಗ ಒಟ್ಟು ಎಷ್ಟು ಪುಸ್ತಕಗಳಿವೆ? ☐

ಜೂನ್ ತಿಂಗಳಿನಲ್ಲಿ ಇತರ ತರಗತಿಗಳಿಂದ 9 ಪುಸ್ತಕಗಳು ವಾಚನಾಲಯಕ್ಕೆ ಸಿಕ್ಕಿದುವು.

? ಒಟ್ಟು ಪುಸ್ತಕಗಳೆಷ್ಟು? ☐

? ಜುಲೈ ತಿಂಗಳಿನಲ್ಲಿ ಲಭಿಸಿದ ಏಳು ಪುಸ್ತಕಗಳಿಗೆ ಕ್ರಮವಾಗಿ ನಂಬರ್ ನೀಡಿರಿ.




### ತಪ್ಪು ಕಂಡುಹಿಡಿಯಿರಿ

1000ಕ್ಕೆ 2 ನ್ನು ಕೂಡಿಸಲು ಹೇಳಿದಾಗ ಅನು ಮಾಡಿದ ಕ್ರಿಯೆಯನ್ನು ನೋಡಿರಿ.

```
1000 +
   2
-----
3000
```

ಅನುವಿನ ಉತ್ತರ ಸರಿಯಾಗಿದೆಯೇ? ☐

ಯಾಕೆ? ☐ ಸರಿಯಾದ ಉತ್ತರ ಎಷ್ಟು? ☐

## ಒಂದಂಕೆ ಸಂಖ್ಯೆಯನ್ನು ಕೂಡಿಸುವ

2000 ದೊಂದಿಗೆ ಒಂದಂಕೆ ಸಂಖ್ಯೆಯನ್ನು ಕೂಡಿಸಿ ನೋಡಿರಿ.

2000 + 5 = ........ 2000 + ........ = ........

4000, 5000, ........ ಇವುಗಳೊಂದಿಗೆ ನಿಮಗಿಷ್ಟವಿರುವ ಒಂದಂಕೆ ಸಂಖ್ಯೆಯನ್ನು ಕೂಡಿಸಿರಿ. ಇದರಂತೆ ನಾಲ್ಕಂಕೆ ಸಂಖ್ಯೆಯೊಂದಿಗೆ ಎರಡಂಕೆ ಸಂಖ್ಯೆಗಳನ್ನೂ ಮೂರಂಕೆ ಸಂಖ್ಯೆಗಳನ್ನೂ ಕೂಡಿಸಿ ನೋಡಿರಿ.

2000 + 54 = .................. 2000 + 303 = ....................

6000 + 10 = ................ 6000 + 410 = ....................

......... + .... = ................ ......... + ....... = ....................

......... + .... = ................ ......... + ....... = ....................

| ಕನ್ನಡ ಅಂಕೆಗಳು | |
|---|---|
| ೧ | 1 |
| ೨ | 2 |
| ೩ | 3 |
| ೪ | 4 |
| ೫ | 5 |
| ೬ | 6 |
| ೭ | 7 |
| ೮ | 8 |
| ೯ | 9 |
| ೦ | 0 |

## ಕಾರ್ಡಿನಿಂದ ಒಂದು ಆಟ

■ ಮಕ್ಕಳು ಕಾರ್ಡುಗಳನ್ನು ಉಪಯೋಗಿಸಿ ಆಡುತ್ತಿರುವರು. ಒಂದು ಪೆಟ್ಟಿಗೆಯಲ್ಲಿ ಕೆಂಪು, ಹಸಿರು, ನೀಲಿ, ಹಳದಿ ಎಂಬೀ ಬಣ್ಣಗಳಲ್ಲಿರುವ ಅನೇಕ ಕಾರ್ಡುಗಳಿವೆ. ಪೆಟ್ಟಿಗೆಯೊಳಗೆ ನೋಡದೆ ಒಬ್ಬರಿಗೆ 8 ಕಾರ್ಡುಗಳನ್ನು ತೆಗೆಯಬಹುದು. ಪ್ರತಿಯೊಂದು ಕಾರ್ಡಿಗೂ ವಿಭಿನ್ನ ಅಂಕಗಳನ್ನು ನೀಡಲಾಗಿದೆ.

| | | | |
|---|---|---|---|
| 1000 | 100 | 10 | 1 |

ಒಂದು ಸಲ ಆಟ ಕೊನೆಗೊಂಡಾಗ ಕ್ಲಾಸಿನ 6 ಮಂದಿ ಮಕ್ಕಳಿಗೆ ಸಿಕ್ಕಿದ ಕಾರ್ಡುಗಳ ಸಂಖ್ಯೆಗಳನ್ನು ನೋಡಿರಿ.

| ಹೆಸರು | ಕೆಂಪು | ಹಸಿರು | ನೀಲಿ | ಹಳದಿ | ಲಭಿಸಿದ ಅಂಕ |
|---|---|---|---|---|---|
| ಅರುಣ್ | 1 | 3 | 2 | 2 | |
| ಮೇರಿ | 1 | 7 | - | - | |
| ಫಾತಿಮ | 1 | - | - | 7 | |
| ಜಾಫರ್ | 1 | - | 2 | 5 | |
| ಉಷ | 2 | - | 6 | - | |
| ಜೋಯಿ | 2 | - | - | 6 | |

? ಅತಿ ಹೆಚ್ಚು ಅಂಕ ಲಭಿಸಿದವರು ಯಾರು? ______

? ಅತಿ ಕಡಿಮೆ ಅಂಕ ಲಭಿಸಿದವರು ಯಾರು? ______

? ಲಭಿಸಿದ ಅಂಕಗಳನ್ನು ಸಣ್ಣ ಸಂಖ್ಯೆಯಿಂದ ದೊಡ್ಡ ಸಂಖ್ಯೆಯವರೆಗೆ ಕ್ರಮವಾಗಿ ಬರೆಯಿರಿ.



| ನಾನು ನನ್ನ ಕುರಿತು | ಹೌದು | ಅಲ್ಲ |
|---|---|---|
| ಪ್ರತಿಯೊಬ್ಬರಿಗೂ ಲಭಿಸಿದ ಅಂಕಗಳನ್ನು ಕಂಡುಹಿಡಿಯಲು ಸಾಧ್ಯವಾಯಿತು. | | |
| ಅತಿ ದೊಡ್ಡ ಅಂಕವನ್ನೂ ಅತಿ ಸಣ್ಣ ಅಂಕವನ್ನೂ ಕಂಡುಹಿಡಿಯಲು ಸಾಧ್ಯವಾಯಿತು. | | |
| ಪ್ರತಿಯೊಬ್ಬರ ಅಂಕಗಳನ್ನು ಕಂಡುಹಿಡಿದ ರೀತಿಯನ್ನು ವಿವರಿಸಲು ನನಗೆ ಸಾಧ್ಯವಾಯಿತು. | | |
| ಸಾವಿರದೊಂದಿಗೆ ಅದಕ್ಕಿಂತ ಸಣ್ಣ ಸಂಖ್ಯೆಗಳನ್ನು ಕೂಡಿಸುವುದು ಹೇಗೆಂದು ನನಗೆ ತಿಳಿದಿದೆ. | | |
| | | |

? ರಹನಿಗೆ 3 ಸಾವಿರಗಳೂ 2 ನೂರುಗಳೂ 3 ಒಂದುಗಳೂ ಲಭಿಸಿದುವು.

ಒಟ್ಟು ಎಷ್ಟು ಅಂಕ ಲಭಿಸಿತು? ☐

? ದಿಯಾಳಿಗೆ ಒಂದು ಹಸಿರು ಕಾರ್ಡು, ಒಂದು ಕೆಂಪು ಕಾರ್ಡು, 3 ರಂತೆ ನೀಲಿ ಮತ್ತು ಹಳದಿ ಕಾರ್ಡುಗಳು ಲಭಿಸಿದುವು. ಹಾಗಾದರೆ ಲಭಿಸಿದ ಒಟ್ಟು ಅಂಕಗಳೆಷ್ಟು? ☐

? ಬಂಧೂರಳಿಗೆ 2123 ಅಂಕಗಳು ಲಭಿಸಿವೆ. ಆದರೆ ಯಾವ ಯಾವ ಕಾರ್ಡುಗಳು ಎಷ್ಟೆಷ್ಟು ಸಿಕ್ಕಿರಬಹುದು? ☐

50 ನೂರುಗಳಿರುವ ಸಂಖ್ಯೆಯು ಎಷ್ಟು ಸಾವಿರಗಳಿರುವ ಸಂಖ್ಯೆಗೆ ಸಮಾನವಾಗಿರುವುದು? 100 ನೂರುಗಳಿರುವ ಸಂಖ್ಯೆಯೋ?

## ಕಾರ್ಡುಗಳೆಷ್ಟು?

| | | | |
|---|---|---|---|
| 1000 | 100 | 10 | 1 |

ಕಾರ್ಡುಗಳನ್ನು ಉಪಯೋಗಿಸಿ ಆಟ ಆಡಿದಾಗ 4 ಮಂದಿ ಮಕ್ಕಳಿಗೆ ಲಭಿಸಿದ ಅಂಕಗಳನ್ನು ನೋಡಿರಿ. ಪ್ರತಿಯೊಬ್ಬರಿಗೂ ಯಾವ ಯಾವ ಕಾರ್ಡುಗಳು ಎಷ್ಟೆಷ್ಟು ಸಿಕ್ಕಿರಬಹುದು? ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಹೆಸರು | ಅಂಕ | | | | |
|---|---|---|---|---|---|
| ಅಚ್ಚು | 3140 | 3 | 1 | 4 | 0 |
| ಜೋನಿ | 2303 | | | | |
| ರಾಣಿ | 3122 | | | | |
| ಜಯ | 2006 | | | | |

ಅಚ್ಚುವಿಗೆ ಮೂರು ಸಾವಿರಗಳು, ಒಂದು ನೂರು ಮತ್ತು ನಾಲ್ಕು ಹತ್ತುಗಳು ಸೇರಿ 3140 ಅಂಕಗಳು ಲಭಿಸಿದೆಯಲ್ಲವೇ?

? 2303 ನ್ನು ಹೇಗೆ ಬರೆಯಬಹುದು?

2303


..............ಸಾವಿರಗಳು

..............ನೂರುಗಳು

..............ಹತ್ತುಗಳು


..............ಒಂದುಗಳು

## ಸೈಕಲು ಖರೀದಿಸುವ



■ ಅಬು, ಜೋನಿ ಮತ್ತು ಬಾಬು ಹೊಸ ಸೈಕಲು ಖರೀದಿಸಿದರು.

ಅಬುವಿನ ಸೈಕಲಿನ ಬೆಲೆ 3250 ರೂಪಾಯಿ. ಅಂಗಡಿಯಲ್ಲಿ ಸಾವಿರ ರೂಪಾಯಿಯ ಮೂರು, ನೂರು ರೂಪಾಯಿಯ ಎರಡು ಮತ್ತು ಹತ್ತು ರೂಪಾಯಿಯ ಐದು ನೋಟುಗಳನ್ನು ನೀಡಿದನು.




**?** ಜೋನಿಯು ಸಾವಿರ ರೂಪಾಯಿಯ 3, ನೂರು ರೂಪಾಯಿಯ 4 ಮತ್ತು ಹತ್ತು ರೂಪಾಯಿಯ 5 ನೋಟುಗಳನ್ನು ನೀಡಿದನು. ಜೋನಿಯ ಸೈಕಲಿನ ಬೆಲೆ ಎಷ್ಟು?

ಅಂಕೆಗಳಲ್ಲಿ [ ]

ಅಕ್ಷರಗಳಲ್ಲಿ [ ]

**?** ಬಾಬು ಹೆಚ್ಚುವರಿಯಾಗಿ ಸೀಟ್ ಕವರ್ ಮತ್ತು ಬೆಲ್ಲನ್ನು ಖರೀದಿಸಿದನು. ಎಲ್ಲವೂ ಸೇರಿ ಒಟ್ಟು ಮೊತ್ತ 4265 ರೂಪಾಯಿ ಆಯಿತು. ಯಾವ ಯಾವ ರೀತಿಯಲ್ಲಿ ಈ ಮೊತ್ತವನ್ನು ಬರೆಯಬಹುದು?

**4265**

- 426 ಹತ್ತುಗಳು<br>5 ಒಂದುಗಳು
- ........ಸಾವಿರಗಳು<br>........ನೂರುಗಳು<br>........ಹತ್ತುಗಳು<br>........ಒಂದುಗಳು
- ........ನೂರುಗಳು<br>6 ಹತ್ತುಗಳು<br>5 ಒಂದುಗಳು
- 4 ಸಾವಿರಗಳು<br>.........ಹತ್ತುಗಳು<br>......ಒಂದುಗಳು
- 42 ನೂರುಗಳು<br>.......ಒಂದುಗಳು
- ........ಒಂದುಗಳು

## ಅಂಕೆಗಳಲ್ಲಿಯೂ ಅಕ್ಷರಗಳಲ್ಲಿಯೂ

| | |
|---|---|
| 4265 | ನಾಲ್ಕು ಸಾವಿರದ ಇನ್ನೂರ ಅರ್ವತ್ತೈದು |
| | ಮೂರು ಸಾವಿರದ ಆರುನೂರ ಇಪ್ಪತ್ತು |
| | ಮೂರು ಸಾವಿರದ ಮೂವತ್ತು |
| 3001 | |
| 5022 | |
| 6070 | |
| | ಏಳು ಸಾವಿರದ ಐನೂರು |
| 9090 | |
| | |

## ನಮೂನೆ ಪೂರ್ತಿಗೊಳಿಸಿರಿ

2100, 2200, 2300, ............... , ............... , ...............

3300, 3200, 3100, ............... , ............... , ...............

5000, 5200, 5400, ............... , ............... , ...............

6500, 6300, 6100, ............... , ............... , ...............

8600, 8700, 8800, ............... , ............... , ...............

## ಬಾಯಿಲೆಕ್ಕವಾಗಿ ಮಾಡೋಣ

1 + 10 + 100 + 1000 =

2 + 20 + 200 + 2000 =

1 + 11 + 111 + 1111 =

2 + 22 + 222 + 2222 =

## ಪೂರ್ತಿಗೊಳಿಸಿರಿ

1020, 1030, 1040, ........, ........, ........

7070, 7080, 7090, ........, ........, ........

2073, 2083, 2093, ........, ........, ........

3940, 3960, 3980, ........, 4020, ........



**4200**

- 4 ಸಾವಿರಗಳು, ............... ನೂರುಗಳು
- .........................ಹತ್ತುಗಳು
- ........................ಒಂದುಗಳು
- ......................ನೂರುಗಳು

**3897**

- 3 ಸಾವಿರಗಳು, .............. ಹತ್ತುಗಳು, 7 ಒಂದುಗಳು
- ...........ನೂರುಗಳು, 9 ಹತ್ತುಗಳು, 7 ಒಂದುಗಳು
- ............ಹತ್ತುಗಳು, 7 ಒಂದುಗಳು
- 3 ಸಾವಿರಗಳು, ...........ಒಂದುಗಳು

**6875**

- 
- 
- 
- 

## ರೋಮನ್ ಸಂಖ್ಯಾ ಪದ್ಧತಿ

I, V, X, L, C, D, M ಎಂಬೀ ಅಕ್ಷರಗಳನ್ನು ರೋಮನ್ ಸಂಖ್ಯಾ ಪದ್ಧತಿಯಲ್ಲಿ ಉಪಯೋಗಿಸುತ್ತಾರೆ.

ರೋಮನ್ ಸಂಖ್ಯಾ ಪದ್ಧತಿಯಲ್ಲಿ ಒಂದನ್ನು ಸೂಚಿಸುವುದು ಹೇಗೆ? [ ]

ಐದನ್ನೋ? [ ]

ಇನ್ನು ನಾಲ್ಕನ್ನು ಹೇಗೆ ಬರೆಯಬಹುದು?

ಐದರ ಎಡಬದಿಯಲ್ಲಿ ಒಂದನ್ನು ಬರೆದು ನಾಲ್ಕನ್ನು ಸೂಚಿಸುವರು - IV

V ರ ಬಲಬದಿಯಲ್ಲಿ I ನ್ನು ಬರೆದು ಆರನ್ನು ಸೂಚಿಸುವರು – VI

V ರ ಬಲಬದಿಯಲ್ಲಿ ಎರಡು I ಗಳನ್ನು ಬರೆದರೆ ಏಳಾಗುವುದು - VII

ಆದರೆ ಎಂಟನ್ನೋ? [ ]

ಒಂಭತ್ತನ್ನೋ? [ ]

| | | |
|---|---|---|
| I | - | 1 |
| V | - | 5 |
| X | - | 10 |
| L | - | 50 |
| C | - | 100 |
| D | - | 500 |
| M | - | 1000 |

## ಪ್ರಶಸ್ತಿಯೂ ಇಸವಿಯೂ

■ ಎಳುತ್ತಚ್ಛನ್ ಪ್ರಶಸ್ತಿ ಲಭಿಸಿದವರ ಹೆಸರುಗಳನ್ನು ಇಸವಿಗನುಸಾರವಾಗಿ ನೀಡಲಾಗಿದೆ. ಇಸವಿಗಳನ್ನು ಅನುಕ್ರಮವಾಗಿ ಬರೆದು ಪೂರ್ತಿಗೊಳಿಸಿರಿ.
















| ಇಸವಿ | ಹೆಸರು |
|---|---|
| 1993 | ಶೂರನ್ನಾಡ್ ಕುಂಞನ್ ಪಿಳ್ಳೈ |
| | ತಕಳಿ ಶಿವಶಂಕರ ಪಿಳ್ಳೈ |
| | ಬಾಲಾಮಣಿಯಮ್ಮ |
| | ಡಾ. ಕೆ.ಎಂ. ಜೋರ್ಜ್ |
| | ಪೊನ್‌ಕುನ್ನಂ ವರ್ಕಿ |
| | ಎಂ.ಪಿ. ಅಪ್ಪನ್ |
| | ಕೆ.ಪಿ. ನಾರಾಯಣ ಪಿಶಾರಡಿ |
| | ಪಾಲಾ ನಾರಾಯಣನ್ ನಾಯರ್ |
| | ಒ.ವಿ. ವಿಜಯನ್ |
| | ಕಮಲ ಸುರಯ್ಯ |
| | ಟಿ. ಪದ್ಮನಾಭನ್ |
| | ಸುಕುಮಾರ್ ಅಳಿಕ್ಕೋಡ್ |
| | ಎಸ್.ಗುಪ್ತನ್ ನಾಯರ್ |
| | ಕೋವಿಲನ್ |
| | ಒ.ಎನ್. ವಿ. ಕುರುಪ್ಪ್ |
| | ಅಕ್ಕಿತಂ ಅಚ್ಚುತನ್ ನಂಬೂದಿರಿ |
| | ಸುಗದ ಕುಮಾರಿ |
| | ಡಾ.ಎಂ. ಲೀಲಾವತಿ |
| | ಎಂ.ಟಿ. ವಾಸುದೇವನ್ ನಾಯರ್ |
| | ಆಟ್ಟೂರ್ ರವಿವರ್ಮ |
| | ಎಂ.ಕೆ. ಸಾನು |
| | ವಿಷ್ಣು ನಾರಾಯಣನ್ ನಂಬೂದಿರಿ |










## ದಾಖಲಾತಿ ಸಂಖ್ಯೆ


■ ಮೀನ ಮತ್ತು ಸಹಪಾಠಿಗಳಿಗೆ ಹೊಸ ಶಾಲೆಯಲ್ಲಿ ಅನುಕ್ರಮವಾದ ದಾಖಲಾತಿ ಸಂಖ್ಯೆಯು ಲಭಿಸಿತು. ಸಂಖ್ಯೆಗಳನ್ನು ಬರೆದು ಪಟ್ಟಿಯನ್ನು ಪೂರ್ತಿಗೊಳಿಸಿರಿ.



| ದಾಖಲಾತಿ ಸಂಖ್ಯೆ | ಹೆಸರು |
|---|---|
| 3008 | ಮೀನ |
| | ಜಸ್ನ |
| | ರಮ್ಯ |
| | ಅಪರ್ಣ |
| | ಶಂನ |
| | ಮಾಯ |

? ಬಳಿಕ 20 ಮಂದಿ ಮಕ್ಕಳು ಇದೇ ಶಾಲೆಗೆ ಸೇರಿದರು. ಕೊನೆಗೆ ಸೇರಿದ ಮಗುವಿನ ದಾಖಲಾತಿ ಸಂಖ್ಯೆ ಎಷ್ಟು? [ ]


? ಒಂದು ತಿಂಗಳ ಬಳಿಕ ಕೊನೆಯ ದಾಖಲಾತಿ ಸಂಖ್ಯೆಯು 3049 ಆಯಿತು. ಆದರೆ ನಂತರ ಸೇರಿದ ಮಕ್ಕಳ ಸಂಖ್ಯೆ ಎಷ್ಟು? [ ]




## ವಿಶ್ವಕಪ್ ಫುಟ್ಬಾಲ್

■ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ವಿಶ್ವಕಪ್ ಫುಟ್ಬಾಲ್ ಸ್ಪರ್ಧೆಯು ನಡೆಯುತ್ತದೆ. ಸ್ಪರ್ಧೆ ನಡೆದ ವರ್ಷಗಳನ್ನು ಅನುಕ್ರಮವಾಗಿ ಬರೆದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ವರ್ಷ | ಸ್ಪರ್ಧೆ ನಡೆದ ದೇಶ |
|---|---|
| | ಅರ್ಜಂಟೀನ |
| | ಸ್ಪೈನ್ |
| | ಮೆಕ್ಸಿಕೋ |
| 1990 | ಇಟಲಿ |
| | ಯು.ಎಸ್.ಎ |
| | ಫ್ರಾನ್ಸ್ |
| | ದಕ್ಷಿಣ ಕೊರಿಯ, ಜಪಾನ್ |
| | ಜರ್ಮನಿ |
| | ದಕ್ಷಿಣ ಆಫ್ರಿಕ |
| | ಬ್ರೆಸಿಲ್ |





? ಮುಂದಿನ ಸ್ಪರ್ಧೆಯು ನಡೆಯುವ ವರ್ಷ ಯಾವುದು? ☐

? ಇದೇ ರೀತಿಯಲ್ಲಿ ಸ್ಪರ್ಧೆ ನಡೆಯುವುದಾದರೆ 2025 ರಲ್ಲಿ ವಿಶ್ವಕಪ್ ಪುಟ್ಬಾಲ್ ಸ್ಪರ್ಧೆ ನಡೆಯಬಹುದೇ? ☐

ಒಂದು ಕಾರಿನ ನಂಬರ್ ಅನುಕ್ರಮವಾದ ನಾಲ್ಕು ಅಂಕೆಗಳಾಗಿವೆ. ಮೊದಲ ಮತ್ತು ಕೊನೆಯ ಅಂಕೆಗಳ ಮೊತ್ತ 9 ಆದರೆ ನಂಬರನ್ನು ಕಂಡುಹಿಡಿಯಬಹುದೇ?

## ಶಿಖರಗಳೂ ಎತ್ತರವೂ

ವಿಶ್ವದ ಕೆಲವು ಶಿಖರಗಳ ಹೆಸರುಗಳನ್ನೂ ಎತ್ತರವನ್ನೂ ಕೊಡಲಾಗಿದೆ. ಎತ್ತರಕ್ಕೆ ಅನುಸಾರವಾಗಿ ಸಣ್ಣದರಿಂದ ದೊಡ್ಡದರವರೆಗೆ ಗುರುತಿಸಿರಿ.



## ಸ್ಥಾನ ಬೆಲೆ

5, 0 ಎಂಬೀ ಅಂಕೆಗಳನ್ನು ಮಾತ್ರ ಉಪಯೋಗಿಸಿ ಯಾವ ಯಾವ ನಾಲ್ಕಂಕೆ ಸಂಖ್ಯೆಗಳನ್ನು ಬರೆಯಬಹುದು?

5000, 5005, ............, ............, ............, ............, ............, ............


? ಈ ಸಂಖ್ಯೆಗಳನ್ನು ಸಣ್ಣ ಸಂಖ್ಯೆಯಿಂದ ದೊಡ್ಡ ಸಂಖ್ಯೆಯವರೆಗೆ ಬರೆಯಿರಿ.

5000, ..........., ..........., ..........., ..........., ..........., ..........., ...........

ಇದರಲ್ಲಿ ಅತ್ಯಂತ ದೊಡ್ಡ ಸಂಖ್ಯೆ 5555 ಆಗಿದೆಯಲ್ಲವೇ.

? ಇದರಲ್ಲಿ ಅತ್ಯಂತ ಎಡಭಾಗದಲ್ಲಿರುವ 5 ರ ಸ್ಥಾನಬೆಲೆ. [ ]

? ಅತ್ಯಂತ ಬಲಭಾಗದಲ್ಲಿರುವ 5 ರ ಸ್ಥಾನ ಬೆಲೆಯೋ? [ ]



### ನಾನು ಯಾರು?

- 1200 ಮತ್ತು 1300ರ ಎಡೆಯಲ್ಲಿ
- ಹತ್ತರ ಸ್ಥಾನದಲ್ಲಿ 3
- ಸಮ ಸಂಖ್ಯೆಯಾಗಿದೆ.
- ಒಂದು ಅಂಕೆಯು ಆವರ್ತಿಸುತ್ತದೆ.

[ ]

### ನನ್ನನ್ನು ಕಂಡುಹಿಡಿಯಬಹುದೇ?


ನಾನೊಂದು ನಾಲ್ಕಂಕೆ ಸಂಖ್ಯೆಯಾಗಿರುವೆನು. ನಾನು ಮತ್ತು ನನ್ನ ಇಮ್ಮಡಿ ಸೇರಿದರೆ ಅತ್ಯಂತ ದೊಡ್ಡ ನಾಲ್ಕಂಕೆ ಸಂಖ್ಯೆ ಸಿಗುವುದು. ನಾನ್ಯಾರೆಂದು ಹೇಳಿರಿ.

### ವಿಷಮವೂ ಸಮವೂ

| | | |
|---|---|---|
| ಒಂದನೇ ಸಮಸಂಖ್ಯೆ | – 2 | ಒಂದನೇ ವಿಷಮ ಸಂಖ್ಯೆ – 1 |
| ಎರಡನೇ ಸಮಸಂಖ್ಯೆ | – | ಎರಡನೇ ವಿಷಮ ಸಂಖ್ಯೆ – |
| ನಾಲ್ಕನೇ ಸಮಸಂಖ್ಯೆ | – | ನಾಲ್ಕನೇ ವಿಷಮ ಸಂಖ್ಯೆ – |
| ಹತ್ತನೇ ಸಮಸಂಖ್ಯೆ 20 ಆಗಿದೆ. | | ಹತ್ತನೇ ವಿಷಮ ಸಂಖ್ಯೆ – |
| 50 ನೇ ಸಮಸಂಖ್ಯೆ | – | 50 ನೇ ವಿಷಮ ಸಂಖ್ಯೆ – |
| 100 ನೇ ಸಮಸಂಖ್ಯೆ | | |
| 400 ಎಂಬುದು ಎಷ್ಟನೇ ಸಮಸಂಖ್ಯೆ ಆಗಿದೆ? | | |

## ಸರಿ ಮತ್ತು ತಪ್ಪು

■ ಒಂದು ಗುಂಪಿನ ಮಕ್ಕಳು ಬರೆದುಕೊಂಡು ಬಂದಿರುವ ಅನುಕ್ರಮವಾದ ಎಣಿಕಾ ಸಂಖ್ಯೆಗಳ ನಮೂನೆಗಳನ್ನು ಅಧ್ಯಾಪಿಕೆ ಕರಿಹಲಗೆಯಲ್ಲಿ ಬರೆದಿರುವರು.




? ನಮೂನೆಗಳಲ್ಲಿ ಸರಿಯಾದವುಗಳನ್ನೂ ತಪ್ಪಾದವುಗಳನ್ನೂ ಕಂಡುಹಿಡಿಯಿರಿ. ತಪ್ಪನ್ನು ತಿದ್ದಿ ಪೂರ್ತಿಗೊಳಿಸಿರಿ.

### ನಾನು ಕಂಡುಹಿಡಿದುದು

| ಸರಿಯಾಗಿರುವುದು | ತಪ್ಪಾದುದನ್ನು ಸರಿಮಾಡಿ ಬರೆದಿರುವುದು |
|---|---|
| | |

### ನಾವು ಯಾರು?

- 2000 ಮತ್ತು 3000 ದ ಎಡೆಯಲ್ಲಿ
- ವಿಷಮ ಸಂಖ್ಯೆಯಾಗಿದೆ.
- ಹತ್ತರ ಸ್ಥಾನದ ಅಂಕೆ 6 ಆಗಿದೆ.
- ಒಂದರ ಮತ್ತು ನೂರರ ಸ್ಥಾನಗಳಲ್ಲಿ ಒಂದೇ ಅಂಕೆಯಿದೆ.

**ಸುಜಿತ್‌ನ ಕಾರಿನ ನಂಬರ್ ಎಷ್ಟು?**

- ಸುಜಿತನ ಕಾರಿನ ನಂಬರ್ ನಾಲ್ಕಂಕೆ ಸಂಖ್ಯೆಯಾಗಿದೆ.
- ಕೊನೆಯ ಅಂಕೆಯು ಮೊದಲ ಅಂಕೆಯ ಇಮ್ಮಡಿಯಾಗಿದೆ.
- ಎರಡನೆ ಮತ್ತು ಮೂರನೆ ಅಂಕೆಗಳು ಸಮಾನವಾಗಿವೆ.
- ಕೊನೆಯ ಎರಡಂಕೆಗಳನ್ನು ಒಳಗೊಂಡ ಸಂಖ್ಯೆಯು ಮೊದಲ ಎರಡಂಕೆಗಳನ್ನು ಒಳಗೊಂಡ ಸಂಖ್ಯೆಯ ಇಮ್ಮಡಿಯಾಗಿದೆ.

? ಅನುಕ್ರಮವಾದ ಮೂರು ಎಣಿಕಾ ಸಂಖ್ಯೆಗಳು ಬರುವ ರೀತಿಯಲ್ಲಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| | | |
|---|---|---|
| 2999, | 3000, | 3001 |
| 2098, | 2099, | .......... |
| 5999, | .........., | 6001 |
| .........., | 6199, | .......... |
| .........., | 4200, | .......... |
| .........., | 7000, | .......... |

**ಸಂಖ್ಯೆಗಳನ್ನು ಬರೆಯುವ**

4, 6, 7, 9 ಎಂಬೀ ಅಂಕೆಗಳನ್ನು ಆವರ್ತಿಸದೆ ಎಷ್ಟು ನಾಲ್ಕಂಕೆ ಸಂಖ್ಯೆಗಳನ್ನು ಬರೆಯಲು ಸಾಧ್ಯವಿದೆ? ಯಾವುವೆಂದು ಬರೆದು ನೋಡಿರಿ. 3, 7, 0, 5 ಎಂಬೀ ಅಂಕೆಗಳಾದರೋ?

## ಸಣ್ಣದೂ ದೊಡ್ಡದೂ

ಪ್ರತಿಯೊಂದು ಸಾಲಿನಲ್ಲಿಯೂ ದೊಡ್ಡ ಸಂಖ್ಯೆಯ ಸುತ್ತ ವೃತ್ತವನ್ನೂ ಸಣ್ಣ ಸಂಖ್ಯೆಯ ಸುತ್ತ ಚೌಕವನ್ನೂ ಎಳೆಯಿರಿ.

| | | | | |
|---|---|---|---|---|
| 4275, | 4257, | 4725, | 4752, | 4572 |
| 4762, | 4726, | 4672, | 4267, | 4276 |
| 4662, | 4757, | 4262, | 4755, | 4266 |
| 4247, | 4772, | 4727, | 4277, | 4272 |
| 4764, | 4677, | 4252, | 4767, | 4257 |

ವೃತ್ತದೊಳಗಿನ ಸಂಖ್ಯೆಗಳನ್ನು ಸಣ್ಣ ಸಂಖ್ಯೆಯಿಂದ ದೊಡ್ಡ ಸಂಖ್ಯೆಯವರೆಗೆ ಕ್ರಮವಾಗಿ ಬರೆಯಿರಿ.

ಈ ಸಂಖ್ಯೆಗಳೊಳಗೆ ಏನಾದರೂ ಸಂಬಂಧವಿದೆಯೇ?

ಚೌಕದೊಳಗಿನ ಸಂಖ್ಯೆಗಳನ್ನು ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯವರೆಗೆ ಕ್ರಮವಾಗಿ ಬರೆಯಿರಿ.

# 2 ಸಮಯ ಚಕ್ರ

## ಗಡಿಯಾರದಲ್ಲಿ ಗುರುತಿಸೋಣ


*ಇಂದಿನ ಪ್ರಮುಖ ಕಾರ್ಯಕ್ರಮಗಳು*
*7.05 ಕ್ಕೆ ಕೃಷಿ ವಾರ್ತೆಗಳು*
*8.31ಕ್ಕೆ ಗ್ರಾಮೀಣ ಭಾರತ 12.40 ಕ್ಕೆ ಗ್ರಾಮಶ್ರೀ.*
*1 ಗಂಟೆಗೆ ಶಾಸ್ತ್ರೀಯ ಸಂಗೀತ*
*6.45 ಕ್ಕೆ ವಯಲುಂ ವೀಡುಂ*
*9.16 ಕ್ಕೆ ಶೈಕ್ಷಣಿಕ ಕಾರ್ಯಕ್ರಮ*




- ರೇಡಿಯೋದಲ್ಲಿನ ಪ್ರಮುಖ ಕಾರ್ಯಕ್ರಮಗಳ ಸಮಯವನ್ನು ಗಡಿಯಾರದಲ್ಲಿ ಗುರುತಿಸಿದರೋ?





ಕೃಷಿ ವಾರ್ತೆಗಳು




ಗ್ರಾಮೀಣ ಭಾರತ














■ ವಾರ್ತೆಯನ್ನು ಗಮನಿಸಿದಿರಲ್ಲವೇ.

ವಾರ್ತೆಯಲ್ಲಿ ಹೇಳಿದ ಸಮಯವನ್ನು ಆಶಾಳು ಗಡಿಯಾರದಲ್ಲಿ ಗುರುತಿಸಿದುದನ್ನು ನೋಡಿರಿ.

ಈ ಗಡಿಯಾರದ ನೀಲಿ ಬಣ್ಣದ ಮುಳ್ಳು ಸೆಕುಂಡು ಮುಳ್ಳಾಗಿದೆ.

ಗಡಿಯಾರದ ಗೆರೆಗಳನ್ನು ಎಣಿಸಿ ನೋಡಿ ಸೆಕುಂಡು ಎಷ್ಟೆಂದು ಹೇಳಬಹುದು.



ಸೆಕುಂಡು ಮುಳ್ಳು 12ರಿಂದ ಪ್ರಾರಂಭಿಸಿ ಪುನಃ 12 ಕ್ಕೆ ತಲುಪಲು ತೆಗೆದುಕೊಳ್ಳುವ 60 ಸೆಕುಂಡು ಸಮಯವೇ 1 ಮಿನಿಟು ಆಗಿದೆ.

- ಮೊದಲನೆ ಗಡಿಯಾರದ ಸಮಯ | 7 ಗಂಟೆ 8 ಸೆಕುಂಡು |
- ಎರಡನೆಯದ್ದೋ?



■ ನಮಗೂ ಒಂದು ಗಡಿಯಾರವನ್ನು ನಿರ್ಮಿಸಿದರೋ?

? ಏನೆಲ್ಲಾ ಬೇಕು?

- ದಪ್ಪವಿರುವ ಕಾಗದ
- 
- 

ನೀವು ತಯಾರಿಸಿದ ಗಡಿಯಾರಗಳನ್ನು ತರಗತಿಯಲ್ಲಿ ಪ್ರದರ್ಶಿಸುವಿರಲ್ಲವೇ.

## ಬರೆಯೋಣ......... ರಚಿಸೋಣ

■ ಪ್ರತಿಯೊಂದು ಗಡಿಯಾರದ ಸಮಯ ಎಷ್ಟೆಂದು ಕೆಳಗೆ ನೀಡಿದ ಕೋಣೆಗಳಲ್ಲಿ ಬರೆಯಿರಿ.



10 ಗಂಟೆ
55 ಮಿನಿಟು
21 ಸೆಕುಂಡು



.......ಗಂಟೆ
.......ಮಿನಿಟು
........ಸೆಕುಂಡು



.......ಗಂಟೆ
.......ಮಿನಿಟು
........ಸೆಕುಂಡು




.......ಗಂಟೆ
.......ಮಿನಿಟು
........ಸೆಕುಂಡು




.......ಗಂಟೆ
.......ಮಿನಿಟು
........ಸೆಕುಂಡು


■ ಕೋಣೆಗಳಲ್ಲಿ ಕೊಟ್ಟಿರುವ ಸಮಯವನ್ನು ಗಡಿಯಾರದಲ್ಲಿ ರಚಿಸೋಣ.




4 ಗಂಟೆ
15 ಮಿನಿಟು
40 ಸೆಕುಂಡು




10 ಗಂಟೆ
30 ಸೆಕುಂಡು



12 ಗಂಟೆ
35 ಮಿನಿಟು
17 ಸೆಕುಂಡು



9 ಗಂಟೆ
55 ಮಿನಿಟು
14 ಸೆಕುಂಡು




6 ಗಂಟೆ
25 ಮಿನಿಟು
2 ಸೆಕುಂಡು



| ನಾನು ನನ್ನ ಕುರಿತು | ಹೌದು | ಅಲ್ಲ |
|---|---|---|
| ಗಡಿಯಾರದ ಪ್ರತಿಯೊಂದು ಮುಳ್ಳು ಏನನ್ನು ಸೂಚಿಸುತ್ತದೆಯೆಂದು ಅರ್ಥೈಸಿಕೊಂಡಿದ್ದೇನೆ. | | |
| ಗಡಿಯಾರದ ಮುಳ್ಳುಗಳ ಸ್ಥಾನವನ್ನು ನೋಡಿ ಸೆಕುಂಡು ಮತ್ತು ಮಿನಿಟನ್ನು ಹೇಳಲು ಸಾಧ್ಯ. | | |
| 24 ಗಂಟೆಗಳು ಸೇರುವಾಗ ಒಂದು ದಿನವಾಗುವುದೆಂದು ತಿಳಿಯಿತು. | | |
| 60 ಮಿನಿಟುಗಳು ಸೇರಿದಾಗ ಒಂದು ಗಂಟೆಯಾಗುವುದೆಂದು ತಿಳಿದಿದೆ. | | |
| 60 ಸೆಕುಂಡುಗಳು ಸೇರಿದಾಗ ಒಂದು ಮಿನಿಟಾಗುವುದೆಂದು ತಿಳಿದಿದೆ. | | |

## 100 ರವರೆಗೆ ಬರೆಯೋಣ

■ 1 ರಿಂದ 100 ರವರೆಗಿನ ಸಂಖ್ಯೆಗಳನ್ನು ಅತ್ಯಂತ ವೇಗವಾಗಿ ಬರೆಯುವ 4 ನೇ ತರಗತಿಯ 6 ಮಂದಿಯನ್ನು ಸ್ಪರ್ಧೆಯ ಮೂಲಕ ಟೀಚರ್ ಕಂಡುಹಿಡಿದರು. ಇವರು ಬರೆಯಲು ತೆಗೆದುಕೊಂಡ ಸಮಯವನ್ನು ಕೆಳಗೆ ಕೊಡಲಾಗಿದೆ. ಅದನ್ನು ಮಿನಿಟುಗಳಿಗೆ ಮತ್ತು ಸೆಕುಂಡುಗಳಿಗೆ ಬದಲಾಯಿಸಿ ಬರೆಯಿರಿ.



| ನಂ. | ಹೆಸರು | ಸೆಕುಂಡುಗಳಲ್ಲಿ | ಮಿನಿಟು ಮತ್ತು ಸೆಕುಂಡುಗಳಲ್ಲಿ |
|---|---|---|---|
| 1. | ಅಜಯ | 95 ಸೆಕುಂಡು | 1 ಮಿನಿಟು ಮತ್ತು 35 ಸೆಕುಂಡು |
| 2. | ಹನ್ನ | 100 ಸೆಕುಂಡು | |
| 3. | ಜೆಸ್ಸಿ | 110 ಸೆಕುಂಡು | |
| 4. | ಡಾನಿಸ್ | | 2 ಮಿನಿಟು ಮತ್ತು 5 ಸೆಕುಂಡು |
| 5. | ಸುಲೇಖ | | 1 ಮಿನಿಟು ಮತ್ತು 45 ಸೆಕುಂಡು |
| 6. | ಫಸ್ನ | | 2 ಮಿನಿಟು |



ಇದೇ ರೀತಿ 100 ರವರೆಗೆ ಬರೆದರೆ ನಿಮ್ಮ ತರಗತಿಯಲ್ಲಿ ಮೊದಲ 5 ಸ್ಥಾನಗಳು ಯಾರಿಗೆಲ್ಲ ಆಗಿರಬಹುದು? ಕಂಡುಹಿಡಿಯಿರಿ.

? 100 ರವರೆಗೆ ಬರೆಯಲು ನಿಮಗೆ ಎಷ್ಟು ಸಮಯ ಬೇಕು?

ಊಹೆ [ ]

ಇನ್ನು ಬರೆದು ನೋಡಿರಿ.

- ಟೀಚರ್ ಸಮಯ ನೋಡುವರು.

## ಓಟ ಸ್ಪರ್ಧೆ


2014 ರ ಇಂಜಿಯೋನ್ ಏಷ್ಯನ್ ಗೇಮ್ಸ್‌ನಲ್ಲಿ ಮಹಿಳೆಯರ 800 ಮೀಟರ್ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ ಕೆಲವು ಕ್ರೀಡಾ ಪಟುಗಳ ಹೆಸರು ಮತ್ತು ಸಮಯವನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.


| ಕ್ರಮ ಸಂಖ್ಯೆ | ಹೆಸರು | ಸಮಯ |
|---|---|---|
| 1. | ವಾಗ್‌ಮೋಯಿ | 2 ಮಿನಿಟು ಮತ್ತು 05 ಸೆಕುಂಡು |
| 2. | ಸುಷಮ ದೇವಿ | 2 ಮಿನಿಟು ಮತ್ತು 01 ಸೆಕುಂಡು |
| 3. | ರಿಗಾಸ ಜನ್‌ಸಬ್ಬ್ ಷೂಮಿ | 2 ಮಿನಿಟು ಮತ್ತು 03 ಸೆಕುಂಡು |
| 4. | ಲಮಾಡಿ ರಾಜ | 2 ಮಿನಿಟು ಮತ್ತು 08 ಸೆಕುಂಡು |
| 5. | ಟಿಂಟು ಲೂಕ | 1 ಮಿನಿಟು ಮತ್ತು 59 ಸೆಕುಂಡು |
| 6. | ಅರ್ಟಿಗಲ ಅಬರ್ತ್ತನ ಗಯಂತಿಕ | 2 ಮಿನಿಟು ಮತ್ತು 06 ಸೆಕುಂಡು |

- ಅತ್ಯಂತ ಕಡಿಮೆ ಸಮಯವನ್ನು ತೆಗೆದುಕೊಂಡವರು ಯಾರು? ಸಮಯವೆಷ್ಟು?
- ಅತ್ಯಂತ ಹೆಚ್ಚು ಸಮಯವನ್ನು ತೆಗೆದುಕೊಂಡವರು ಯಾರು? ಸಮಯವೆಷ್ಟು?
- ಕಡಿಮೆ ಸಮಯದಿಂದ ಹೆಚ್ಚಿನ ಸಮಯಕ್ಕೆ ಎಂಬ ರೀತಿಯಲ್ಲಿ ಪಟ್ಟಿಯನ್ನು ಕ್ರಮೀಕರಿಸಿರಿ.
- ಪಟ್ಟಿಯಲ್ಲಿರುವ ಸಮಯವನ್ನು ಸೆಕುಂಡುಗಳಾಗಿ ಬರೆಯಿರಿ.


## ಶುಭ ಪ್ರಯಾಣ

■ ಜೋನಿ ಮತ್ತು ಕುಟುಂಬದವರು ಪ್ರಯಾಣ ಹೋಗುತ್ತಿದ್ದಾರೆ.






## ಬದಲಿಸಿ ಬರೆಯೋಣ

■ ವಿವಿಧ ಸ್ಟೇಷನುಗಳಿಂದ ಹೊರಡುವ ರೈಲುಗಾಡಿಗಳ ಸಮಯವನ್ನು ಪಟ್ಟಿಯಲ್ಲಿ ನೀಡಲಾಗಿದೆ. ನೀಡಿರುವ ರೈಲುಗಾಡಿಗಳ ಸಮಯವನ್ನು am/pm ಎಂಬ ರೀತಿಗೆ ಬದಲಿಸಿ ಬರೆಯಿರಿ.

| ಗಾಡಿಯ ನಂಬ್ರ | ಗಾಡಿಯ ಹೆಸರು | ಹೊರಡುವ ಸಮಯ | am/pm |
|---|---|---|---|
| 16307 | ಆಲಪ್ಪುಝ – ಕಣ್ಣೂರು ಎಕ್ಸ್‌ಪ್ರೆಸ್ | 14:55 | |
| 16042 | ಆಲಪ್ಪುಝ – ಚೆನ್ನೈ ಎಕ್ಸ್‌ಪ್ರೆಸ್ | 16:00 | |
| 12977 | ಎರ್ನಾಕುಳಂ – ಅಜ್ಮೀರ್ ಮರುಸಾಗರ್ ಎಕ್ಸ್‌ಪ್ರೆಸ್ | 20:05 | 8:05 pm |
| 16359 | ಎರ್ನಾಕುಳಂ – ಪಾಟ್ನ ಎಕ್ಸ್‌ಪ್ರೆಸ್ | 23:00 | |
| 12625 | ತಿರುವನಂತಪುರ – ದೆಹಲಿ ಕೇರಳ ಎಕ್ಸ್‌ಪ್ರೆಸ್ | 11:15 | |
| 16302 | ತಿರುವನಂತಪುರ – ಶೊರ್ನೂರು ವೇಣಾಡ್ ಎಕ್ಸ್‌ಪ್ರೆಸ್ | 5:00 | |


■ ಪಟ್ಟಿಯಲ್ಲಿ ಬಸ್ಸುಗಳ ಸಮಯವನ್ನು am/pm ಗಳಲ್ಲಿ ನೀಡಲಾಗಿದೆ. ಅವುಗಳನ್ನು 24 ಗಂಟೆಗಳನ್ನು ತೋರಿಸುವ ಗಡಿಯಾರದ ಸಮಯವನ್ನಾಗಿ ಮಾಡಿ ಬದಲಿಸಿ ಬರೆಯಿರಿ.

| ಬಸ್ಸು ಹೋಗುವ ದಾರಿ | ಹೊರಡುವ ಸಮಯ | 24 ಗಂಟೆಯ ಗಡಿಯಾರದಲ್ಲಿ |
|---|---|---|
| ತಿರುವನಂತಪುರ – ಎರ್ನಾಕುಳಂ | 11:15 am | |
| ತಿರುವನಂತಪುರ – ಕೋಝಿಕ್ಕೋಡ್ | 6:30 am | |
| ಗುರುವಾಯೂರು – ಕಣ್ಣೂರು | 1:40 pm | 13:40 |
| ಕೋಝಿಕ್ಕೋಡ್ – ಪಾಲಕ್ಕಾಡ್ | 3:45 pm | |
| ತ್ರಿಶೂರು – ತಿರುವನಂತಪುರ | 11:40 pm | |
| ಆಲಪ್ಪುಯ – ಕೋಝಿಕ್ಕೋಡ್ | 8:05 am | |

## ಶಾಲೆಗೆ

■ ನಿಮ್ಮ ಶಾಲೆಯು ಕಾರ್ಯಾಚರಿಸುವ ಸಮಯ [ ]

- ಅದನ್ನು am/pm ಗೆ ಬದಲಿಸಿ ಬರೆಯಿರಿ. [ ]
- 24 ಗಂಟೆಯನ್ನು ತೋರಿಸುವ ಗಡಿಯಾರದಲ್ಲಾದರೋ? [ ]





? ನಿಮ್ಮ ಶಾಲೆ ಒಟ್ಟು ಎಷ್ಟು ಗಂಟೆಗಳ ಕಾಲ ಕಾರ್ಯ ನಿರ್ವಹಿಸುತ್ತದೆ?

[ ]

? ಮಧ್ಯಾಹ್ನದ ಊಟದ ಸಮಯ ಮತ್ತು ಎರಡು ಹೊತ್ತಿನ ವಿರಾಮದ ಸಮಯ ಇವುಗಳನ್ನು ಬಿಟ್ಟರೆ ಒಟ್ಟು ಕಲಿಕಾ ಸಮಯ ಎಷ್ಟು? [ ]



## ನ್ಯಾಯ ಬೆಲೆ ಅಂಗಡಿ




ಈ ನ್ಯಾಯಬೆಲೆ ಅಂಗಡಿಯು ಒಂದು ದಿನದಲ್ಲಿ ಎಷ್ಟು ಗಂಟೆಗಳ ಕಾಲ ಕಾರ್ಯಾಚರಿಸುತ್ತದೆ?

[ ]

**ನಾನು ಕಂಡುಕೊಂಡ ವಿಧಾನ**



[ ]

## ಬ್ಯಾಂಕಿಗೆ





? ಶನಿವಾರದಂದು ಬ್ಯಾಂಕ್ ಎಷ್ಟು ಗಂಟೆಗಳ ಕಾಲ ಕಾರ್ಯ ನಿರ್ವಹಿಸುತ್ತದೆ? [ ]

? ಉಳಿದ ದಿನಗಳಲ್ಲೋ? [ ]

## ಕೆಲಸದ ಸಮಯ

■ ಒಂದು ಕಾರ್ಖಾನೆಯ ಕೆಲಸದ ಸಮಯವನ್ನು ಎರಡು ಪಾಳಿ (ಶಿಫ್ಟ್) ಗಳಾಗಿ ಕ್ರಮೀಕರಿಸಲಾಗಿದೆ.




? ಕಾರ್ಖಾನೆಯ ಒಟ್ಟು ಕೆಲಸದ ಸಮಯ am/pm ನಲ್ಲಿ

................ರಿಂದ................ ವರೆಗೆ

? 24 ಗಂಟೆಯನ್ನು ತೋರಿಸುವ ಗಡಿಯಾರದಲ್ಲಿ ಗುರುತಿಸಿದರೋ?

................ರಿಂದ................ ವರೆಗೆ

? ಒಟ್ಟು ಎಷ್ಟು ಗಂಟೆಗಳ ಕಾಲ ಕಾರ್ಖಾನೆ ಕೆಲಸ ನಿರ್ವಹಿಸುವುದು?

? ಕಾರ್ಖಾನೆ ಕೆಲಸ ನಿರ್ವಹಿಸದ ಸಮಯವನ್ನು am/pm ಗಳಲ್ಲಿ ದಾಖಲಿಸುವುದು ಹೇಗೆ?

................ರಿಂದ................ ವರೆಗೆ

? ಪ್ರತಿಯೊಂದು ಶಿಫ್ಟಿನಲ್ಲೂ ಕಾರ್ಯಾಚರಿಸುವ ಸಮಯ ಎಷ್ಟು?

? ವಿಶ್ರಾಂತಿ ಸಮಯವನ್ನು ಕಳೆದರೆ ಪ್ರತಿಯೊಂದು ಶಿಫ್ಟಿನಲ್ಲೂ ಎಷ್ಟು ಸಮಯ ಕೆಲಸ ಮಾಡುತ್ತಿದ್ದಾರೆ?

? ಹೆಚ್ಚು ಸಮಯ ಕೆಲಸ ಮಾಡುವುದು ಯಾವ ಶಿಫ್ಟಿನ ಕಾರ್ಮಿಕರು?



| ನಾನು ನನ್ನ ಕುರಿತು | ಹೌದು | ಅಲ್ಲ |
|---|---|---|
| ಕಾರ್ಯ ನಿರ್ವಹಿಸುವ ಸಮಯವನ್ನು ಕಂಡುಹಿಡಿಯಲು ಸಾಧ್ಯವಾಯಿತು | | |
| 24 ಗಂಟೆಯ ಗಡಿಯಾರದಲ್ಲಿ ಸಮಯವನ್ನು ಬರೆಯಲು ಸಾಧ್ಯವಾಯಿತು | | |
| 12 ಗಂಟೆಯ ಗಡಿಯಾರದಲ್ಲಿ am, pm ಉಪಯೋಗಿಸಿ ದಾಖಲಿಸಿದೆ | | |
| ಎರಡು ಸಮಯಗಳೊಳಗಿನ ಸಮಯದ ಅಂತರ ಎಷ್ಟೆಂದು ಕಂಡುಹಿಡಿದೆ | | |
| ಒಂದು ಸಮಯದಿಂದ ನಿಶ್ಚಿತ ಸಮಯವನ್ನು ಕಳೆದು ಕಂಡುಹಿಡಿಯಲು ಸಾಧ್ಯವಾಯಿತು | | |


## ಸರ್ಕಸ್



❓ ಸರ್ಕಸ್ ಕಲಾವಿದನಾದ ರಾಜುವು ತನ್ನ ಸೈಕಲ್ ಯಜ್ಞವನ್ನು 6:15am ಗೆ ಆರಂಭಿಸಿ 9.30pm ಗೆ ಕೊನೆಗೊಳಿಸಿದನು. ಹಾಗಾದರೆ ಅವನು ಒಂದು ದಿನದಲ್ಲಿ ಎಷ್ಟು ಗಂಟೆಗಳ ಕಾಲ ಸೈಕಲ್ ಓಡಿಸುವನು?

- ಏನೆಲ್ಲಾ ಮಾಹಿತಿಗಳನ್ನು ನೀಡಲಾಗಿದೆ?
  - am, pm ಎಂಬ ರೀತಿಯಲ್ಲಿ ಸಮಯವನ್ನು ನೀಡಿದ್ದಾರೆ.
  -

ಹೇಗೆ ಕಂಡುಹಿಡಿಯಬಹುದು?








- ಮೊದಲು am ನಲ್ಲಿರುವ ಸಮಯವನ್ನು ನಿರೀಕ್ಷಣೆ ಮಾಡುವ.
- 6.15 am ನಿಂದ 7am ವರೆಗೆ – 45 ಮಿನಿಟು
- 7 am ನಿಂದ ಮಧ್ಯಾಹ್ನ 12 ರವರೆಗೆ – 5 ಗಂಟೆಗಳು
- am ನಲ್ಲಿರುವ ಒಟ್ಟು ಸಮಯ – 5 ಗಂಟೆ ಮತ್ತು 45 ಮಿನಿಟು
- ಇನ್ನು pm ನ್ನು ಪರಿಶೀಲಿಸೋಣ.
- ಮಧ್ಯಾಹ್ನ 12 ರಿಂದ 9.30 pm ವರೆಗೆ
- 9 ಗಂಟೆ ಮತ್ತು 30 ಮಿನಿಟು

ಇದನ್ನು ನಮಗೆ ಹೀಗೆ ಬದಲಾಯಿಸಿ ಬರೆಯಬಹುದು.

6.15 am ನಿಂದ 9.30 pm ವರೆಗೆ

| | |
|---|---|
| amನಲ್ಲಿರುವ ಸಮಯ ► | 5 ಗಂಟೆಗಳು ಮತ್ತು 45 ಮಿನಿಟುಗಳು |
| pm ನಲ್ಲಿರುವ ಸಮಯ ► | 9 ಗಂಟೆಗಳು ಮತ್ತು 30 ಮಿನಿಟುಗಳು |
| | 14 ಗಂಟೆಗಳು ಮತ್ತು 75 ಮಿನಿಟುಗಳು |

**75 ಮಿನಿಟು ಅಂದರೆ 1 ಗಂಟೆ ಮತ್ತು 15 ಮಿನಿಟುಗಳು**




14 ಗಂಟೆಗಳು
1 ಗಂಟೆ ಮತ್ತು 15 ಮಿನಿಟುಗಳು

15 ಗಂಟೆಗಳು ಮತ್ತು 15 ಮಿನಿಟುಗಳು ಎಂದು ಸಿಗುವುದು.

? ರಾಜುವಿನ ಸರ್ಕಸ್ ಕಂಪೆನಿಯು ಪಟ್ಟಣದ ಸರ್ಕಸ್ ಪ್ರದರ್ಶನವನ್ನು ಕೊನೆಗೊಳಿಸಿ ಮತ್ತೊಂದು ಪಟ್ಟಣಕ್ಕೆ ಪ್ರಯಾಣಿಸಿತು. 10.45 pm ಗೆ ಹೊರಟ ಇವರು 7.30 am ಗೆ ಹೊಸ ಸ್ಥಳಕ್ಕೆ ತಲುಪಿದರು. ಹಾಗಾದರೆ ಪ್ರಯಾಣಕ್ಕೆ ತೆಗೆದುಕೊಂಡ ಸಮಯ ಎಷ್ಟು?

ನಾನು ಕಂಡುಕೊಂಡ ವಿಧಾನ






? ಕೊಯಂಬತ್ತೂರಿನಿಂದ 22.30ಕ್ಕೆ ಹೊರಡುವ ಒಂದು ಬಸ್ಸು ಮರುದಿನ ಬೆಳಿಗ್ಗೆ 4.15 ಕ್ಕೆ ಕೋಝಿಕ್ಕೋಡಿಗೆ ತಲುಪುವುದು. ಪ್ರಯಾಣಕ್ಕೆ ತೆಗೆದುಕೊಂಡ ಸಮಯ ಎಷ್ಟು?

- ಹೇಗೆ ಕಂಡುಹಿಡಿಯಬಹುದು?
- ಏನೆಲ್ಲಾ ಮಾಹಿತಿಗಳನ್ನು ಕೊಟ್ಟಿದ್ದಾರೆ?
- 24 ಗಂಟೆಗಳ ಗಡಿಯಾರದ ಸಮಯವನ್ನು ಕೊಟ್ಟಿದ್ದಾರೆ.
- ನೀಡಿದ ಸಮಯವನ್ನು am, pm ಎಂಬ ರೀತಿಗೆ ಬದಲಾಯಿಸಿದರೋ?
- 22.30 ಎಂಬುವುದು 10.30 pm ಅಲ್ಲವೇ? ಹಾಗಾದರೆ
  - 10.30 pm ನಿಂದ ರಾತ್ರಿ 12 ಗಂಟೆಯವರೆಗೆ → ಒಂದು ಗಂಟೆ ಮತ್ತು 30 ಮಿನಿಟು
  - ರಾತ್ರಿ 12 ಗಂಟೆಯಿಂದ 4.15 am ವರೆಗೆ → ನಾಲ್ಕು ಗಂಟೆ ಮತ್ತು 15 ಮಿನಿಟು




► 1 ಗಂಟೆ ಮತ್ತು 30 ಮಿನಿಟುಗಳು
► 4 ಗಂಟೆಗಳು ಮತ್ತು 15 ಮಿನಿಟುಗಳು

---

? ಬೆಂಗಳೂರಿನಿಂದ 22.15 ಕ್ಕೆ ಹೊರಡುವ ಸೂಪರ್ ಫಾಸ್ಟ್ ಬಸ್ಸು ಮರುದಿನ ಬೆಳಗ್ಗೆ 6.45 ಕ್ಕೆ ಕಣ್ಣೂರಿಗೆ ತಲುಪುವುದು. ಈ ಬಸ್ಸು ಪ್ರಯಾಣಕ್ಕೆ ತೆಗೆದುಕೊಂಡ ಸಮಯ ಎಷ್ಟು?

ನಾನು ಕಂಡುಕೊಂಡ ವಿಧಾನ





? ಬೆಳಿಗ್ಗೆ 9 ಗಂಟೆಗೆ ಹೊರಟ ಪ್ರವಾಸದ ಬಸ್ಸು ಮರುದಿನ ಬೆಳಿಗ್ಗೆ 9 ಗಂಟೆಗೆ ಉದ್ದೇಶಿಸಿದ ಸ್ಥಳಕ್ಕೆ ತಲುಪಿತು. ಹಾಗಾದರೆ ಪ್ರಯಾಣಕ್ಕೆ ತೆಗೆದುಕೊಂಡ ಸಮಯ ಎಷ್ಟು?

? ವಿದ್ಯುತ್ ಕೊರತೆಯ ಕಾರಣ 8 am ನಿಂದ 14 ಗಂಟೆಗಳ ಕಾಲ ವಿದ್ಯುತ್ ನಿಯಂತ್ರಣವನ್ನು ಏರ್ಪಡಿಸಲಾಯಿತು. ಹಾಗಾದರೆ ವಿದ್ಯುತ್ ನಿಯಂತ್ರಣ ಕೊನೆಗೊಳ್ಳುವ ಸಮಯ ಯಾವುದು?


## ಪಟ್ಟಿಯನ್ನು ಪೂರ್ತಿಗೊಳಿಸೋಣ

ಪ್ರಯಾಣಕ್ಕೆ ತೆಗೆದುಕೊಂಡ ಸಮಯವನ್ನು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಗಾಡಿಯ ನಂಬರ್ | ರೈಲುಗಾಡಿಯ ಹೆಸರು | ಹೊರಡುವ ಸಮಯ | ತಲುಪುವ ಸಮಯ | ಪ್ರಯಾಣಕ್ಕೆ ತೆಗೆದುಕೊಂಡ ಸಮಯ |
|---|---|---|---|---|
| 16650 | ನಾಗರ್‌ಕೋವಿಲ್ – ಮಂಗಳೂರು ಎಕ್ಸ್‌ಪ್ರೆಸ್ | 4:20 | 20:25 | |
| 22607 | ಎರ್ನಾಕುಳಂ – ಬೆಂಗಳೂರು ಎಕ್ಸ್‌ಪ್ರೆಸ್ | 17:00 | ಮರುದಿವಸ 4:20 | |
| 12623 | ಚೆನ್ನೈ – ತಿರುವನಂತಪುರ ಮೈಲ್ | 19:45 | ಮರುದಿವಸ 11:45 | |
| 16347 | ತಿರುವನಂತಪುರ – ಮಂಗಳೂರು ಎಕ್ಸ್‌ಪ್ರೆಸ್ | 20:40 | ಮರುದಿವಸ 10:55 | |
| 12081 | ಕಣ್ಣೂರು – ತಿರುವನಂತಪುರ ಜನಶತಾಬ್ದಿ ಎಕ್ಸ್‌ಪ್ರೆಸ್ | 4:45 | | 9 ಗಂಟೆಗಳು |
| 56650 | ಕಣ್ಣೂರು ಕೊಯಂಬತ್ತೂರು ಸೂಪರ್ ಫಾಸ್ಟ್ | 5:45 | | 7 ಗಂಟೆಗಳು ಮತ್ತು 40 ಮಿನಿಟುಗಳು |

? ಪ್ರಯಾಣಕ್ಕೆ ಹೆಚ್ಚು ಸಮಯ ತೆಗೆದುಕೊಂಡ ರೈಲುಗಾಡಿ ಯಾವುದು? ಕಡಿಮೆಯೋ?

## ಕ್ಯಾಲೆಂಡರ್ ನೋಡೋಣ



- ಕ್ಯಾಲೆಂಡರಿನಲ್ಲಿ ಯಾವೆಲ್ಲಾ ವರ್ಷಗಳನ್ನು ದಾಖಲಿಸಲಾಗಿದೆ?

| ಶಕ ವರ್ಷ | | |
|---|---|---|

- ಈ ವರ್ಷಗಳ ತಿಂಗಳುಗಳು ಮತ್ತು ಪ್ರತಿಯೊಂದು ತಿಂಗಳಿನ ದಿನಗಳ ಸಂಖ್ಯೆಯನ್ನು ವರ್ಗೀಕರಿಸಿ ಬರೆಯಿರಿ.
- ಒಂದು ವರ್ಷದಲ್ಲಿ ಒಟ್ಟು ಎಷ್ಟು ದಿನಗಳಿವೆ?
- ಕ್ಯಾಲೆಂಡರಿನಲ್ಲಿ ವಿಭಿನ್ನ ವರ್ಷ ಕ್ರಮಗಳ ತಾರೀಕುಗಳನ್ನು ಎಲ್ಲಿ ದಾಖಲಿಸಲಾಗಿದೆ?
- ಮುಂದಿನ ವರ್ಷದ ಜನವರಿ 1 ನೇ ತಾರೀಕು ಯಾವ ದಿವಸ?



ಈ ವರ್ಷದ ಇಂಗ್ಲೀಷ್ ತಾರೀಕುಗಳ ಇತರ ವರ್ಷ ಕ್ರಮಗಳ ತಾರೀಕುಗಳನ್ನು ಕೋಣೆಗಳಲ್ಲಿ ಬರೆಯಿರಿ.

| ಇಂಗ್ಲೀಷ್ ವರ್ಷ | ಆಗಸ್ಟ್ 15 | ಒಕ್ಟೋಬರ್ 2 | ನವೆಂಬರ್ 14 |
|---|---|---|---|
| ಶಕ ವರ್ಷ | | | |
| ಕೊಲ್ಲ ವರ್ಷ | | | |
| ಹಿಜಿರ ವರ್ಷ | | | |




- ಈ ವರ್ಷದ ಯಾವ ಯಾವ ತಿಂಗಳುಗಳಲ್ಲಿ 5 ಆದಿತ್ಯವಾರಗಳಿವೆ?
- 1 ನೇ ತಾರೀಕು ಬುಧವಾರವಾದರೆ 28 ನೇ ತಾರೀಕು ಯಾವ ದಿವಸ?
- 15 ನೇ ತಾರೀಕು ಆದಿತ್ಯವಾರ ಬರುವ ಎಷ್ಟು ತಿಂಗಳುಗಳು ಈ ವರ್ಷದಲ್ಲಿವೆ? ಆ ತಿಂಗಳುಗಳ 1ನೇ ತಾರೀಕು ಯಾವ ದಿವಸವಾಗಿರಬಹುದು?



## ಜನ್ಮದಿನ




? ನಿಮ್ಮ ಜನ್ಮ ದಿನಾಂಕ ಯಾವುದು?

? ಅದು ಈ ವರ್ಷದಲ್ಲಿ ಯಾವ ದಿವಸ?

? ಈ ವರ್ಷ ನಿಮ್ಮ ಜನ್ಮ ದಿನಾಂಕವು ಕೊಲ್ಲವರ್ಷದ ಯಾವ ತಾರೀಕಿನಲ್ಲಾಗಿದೆ?



ಇದೇ ರೀತಿ ನಿಮ್ಮ ಮನೆಯ ಇತರ ಸದಸ್ಯರ ಜನ್ಮದಿನಾಂಕವನ್ನು ಕಂಡುಹಿಡಿದು ಬರೆಯಿರಿ.

| ಕ್ರಮ ಸಂಖ್ಯೆ | ಸದಸ್ಯರು | ಜನ್ಮದಿನಾಂಕ | ಈ ವರ್ಷದ ದಿವಸ | ಕೊಲ್ಲ ವರ್ಷ ತಿಂಗಳು, ತಾರೀಕು |
|---|---|---|---|---|
| 1 | ಅಜ್ಜ | | | |
| 2 | ಅಜ್ಜಿ | | | |
| 3 | ತಂದೆ | | | |
| 4 | | | | |
| 5 | | | | |

- ಒಂದು ಕ್ಯಾಲೆಂಡರಿನ ಭಾಗವನ್ನು ಕೊಡಲಾಗಿದೆ. ಪ್ರಶ್ನಾ ಚಿಹ್ನೆಯನ್ನು ಹಾಕಿರುವ ಕೋಣೆಯೊಳಗಿನ ತಾರೀಕು ಎಷ್ಟು?

| | | | | | | |
|---|---|---|---|---|---|---|
| | | | 16 | 17 | | |
| | | | | | ? | |

## 366 ದಿನಗಳು

### ಫೆಬ್ರವರಿ 2012

| SUN ಆದಿತ್ಯ | MON ಸೋಮ | TUE ಮಂಗಳ | WED ಬುಧ | THU ಗುರು | FRI ಶುಕ್ರ | SAT ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | | | |

### ಫೆಬ್ರವರಿ 2013

| SUN ಆದಿತ್ಯ | MON ಸೋಮ | TUE ಮಂಗಳ | WED ಬುಧ | THU ಗುರು | FRI ಶುಕ್ರ | SAT ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | | |

### ಫೆಬ್ರವರಿ 2014

| SUN ಆದಿತ್ಯ | MON ಸೋಮ | TUE ಮಂಗಳ | WED ಬುಧ | THU ಗುರು | FRI ಶುಕ್ರ | SAT ಶನಿ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | |


### ಫೆಬ್ರವರಿ 2015


| SUN ಆದಿತ್ಯ | MON ಸೋಮ | TUE ಮಂಗಳ | WED ಬುಧ | THU ಗುರು | FRI ಶುಕ್ರ | SAT ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |

### ಫೆಬ್ರವರಿ 2016

| SUN ಆದಿತ್ಯ | MON ಸೋಮ | TUE ಮಂಗಳ | WED ಬುಧ | THU ಗುರು | FRI ಶುಕ್ರ | SAT ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | | | | | |




- 2016 ಫೆಬ್ರವರಿಯ ಕ್ಯಾಲೆಂಡರ್ ನೋಡಿದಿರಲ್ಲವೇ. ಮುಂದಿನ ಅಧಿಕ ವರ್ಷ ಯಾವ ಇಸವಿಯಾಗಿರಬಹುದು? ಆ ವರ್ಷದ ಫೆಬ್ರವರಿ ತಿಂಗಳಿನ ಕ್ಯಾಲೆಂಡರನ್ನು ತಯಾರಿಸಿರಿ. (2020 ಫೆಬ್ರವರಿ 1 ಶನಿವಾರವಾಗಿದೆ)

## ಸಮಯ ರೇಖೆ (TIME LINE)

ನಮ್ಮ ರಾಷ್ಟ್ರಪಿತರಾದ ಮಹಾತ್ಮ ಗಾಂಧಿಯವರ ಕುರಿತು ಒಂದು ಸಮಯ ರೇಖೆಯನ್ನು ತಯಾರಿಸೋಣ.

ಗಾಂಧೀಜಿಯವರ ಜನ್ಮದಿನಾಂಕ................

1887 ಮೆಟ್ರಿಕುಲೇಷನ್ ಪಾಸಾದರು

1915 ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದರು.

1893 ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಕೆಲಸದ ನಿಮಿತ್ತ ತಲುಪಿದರು.

1930 ರಲ್ಲಿ ಉಪ್ಪಿನ ಸತ್ಯಾಗ್ರಹದ ಅಂಗವಾಗಿ ದಂಡಿ ಯಾತ್ರೆ.

1917 ಜೂನ್‌ನಲ್ಲಿ ಸಬರ್ಮತಿ ಆಶ್ರಮವನ್ನು ಸ್ಥಾಪಿಸಿದರು

1920 ರಲ್ಲಿ ಗಾಂಧೀಜಿಯವರು ಮೊದಲ ಸಲ ಕೇರಳಕ್ಕೆ ತಲುಪಿದರು.

1922 ರಲ್ಲಿ ಚೌರಿಚೌರ ಘಟನೆ ನಡೆಯಿತು.

1891 ರಲ್ಲಿ ವಕೀಲರಾದರು.

1947 ಆಗಸ್ಟ್ 15 ರಂದು ಭಾರತವು ಸ್ವತಂತ್ರವಾಯಿತು.

1888 ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಇಂಗ್ಲೇಂಡಿಗೆ ತೆರಳಿದರು.

'ಮಾಡು ಇಲ್ಲವೇ ಮಡಿ'– ಕ್ವಿಟ್ ಇಂಡಿಯಾ ಚಳುವಳಿ 1942 ರಲ್ಲಿ

ಗಾಂಧೀಜಿಯವರ ಭಾರತದಲ್ಲಿನ ಮೊದಲ ಸತ್ಯಾಗ್ರಹ 1917 ರ ಏಪ್ರಿಲ್ ತಿಂಗಳಿನಲ್ಲಿ ಚಂಪರಣ್‌ನಲ್ಲಿ ಜರುಗಿತು.

1948 ಜನವರಿ 30 ಶುಕ್ರವಾರ ಗಾಂಧೀಜಿಯವರು ಹುತಾತ್ಮರಾದರು.



ಗಾಂಧೀಜಿಯವರ ಕುರಿತು ಓದಿದಿರಲ್ಲವೇ? ಕಾಲಕ್ಕೆ ಅನುಗುಣವಾಗಿ ಪ್ರತಿಯೊಂದು ಉರುಟಲ್ಲೂ ನಂಬ್ರವನ್ನು ನೀಡಿರಿ. ಅವುಗಳನ್ನು ಒಂದು ಸಮಯ ರೇಖೆಯಲ್ಲಿ ಬರೆಯಿರಿ.

- ಗಾಂಧೀಜಿಯವರ ಜನ್ಮದಿನವು ಕೊಲ್ಲ ವರ್ಷದ ಯಾವ ತಿಂಗಳಲ್ಲಿ ಬರುವುದು? ದಿನಾಂಕವೋ? [ ]
- ಗಾಂಧೀಜಿಯವರ ಎಷ್ಟನೇ ಹುಟ್ಟು ಹಬ್ಬವನ್ನು ಈ ವರ್ಷ ಆಚರಿಸಲಾಗುತ್ತದೆ? [ ]

## ವಿಚಾರಿಸಿ ಕಂಡುಹಿಡಿಯುವ, ಸಿದ್ಧಪಡಿಸುವ

- ದೀಪ ಹಚ್ಚುವ ಸಮಯ, ಅರುಣೋದಯ, ಮುಸ್ಸಂಜೆ, ಮುಂಜಾನೆ, ಪ್ರಾತಃಕಾಲ ಮೊದಲಾದ ಅನೇಕ ಪ್ರಯೋಗಗಳು ನಮ್ಮ ಊರಿನಲ್ಲಿ ಸಮಯಕ್ಕೆ ಸಂಬಂಧಿಸಿ ಬಳಕೆಯಲ್ಲಿದೆ. ನಿಮ್ಮ ಊರಿನಲ್ಲಿಯೂ ಈ ರೀತಿಯಲ್ಲಿರುವ ಪ್ರಯೋಗಗಳು ಬಳಕೆಯಲ್ಲಿ ಇರಬಹುದು. ಅವುಗಳನ್ನು ವಿಚಾರಿಸಿ ತಿಳಿದು ಅದರ ಸಂದರ್ಭವನ್ನು ಮತ್ತು ಅರ್ಥವನ್ನು ಒಂದು ಪ್ರೊಜೆಕ್ಟಾಗಿ ಮಂಡಿಸಿರಿ.
- ಉಣ್ಣಿ ಕುಟ್ಟನ ಕೈಯಿಂದ ಗಡಿಯಾರವು ಕೆಳಗೆ ಬಿತ್ತು. ಅದರ ಡಯಲ್ ಮೂರು ತುಂಡುಗಳಾದುವು. ಆದರೆ ಅದರ ಪ್ರತಿಯೊಂದು ತುಂಡುಗಳಲ್ಲಿರುವ ಅಂಕೆಗಳನ್ನು ಕೂಡಿಸಿದಾಗ ಸಿಗುವ ಮೊತ್ತವು ಸಮಾನವಾಗಿದೆ. ಇದನ್ನು ಚಿತ್ರ ಮಾಡಿ ತೋರಿಸುವಿರಾ?
- ಒಂದು ಗಡಿಯಾರವನ್ನು 6 ಭಾಗಗಳಾಗಿ ಮಾಡಿದಾಗ ಪ್ರತಿಯೊಂದು ಭಾಗದಲ್ಲಿರುವ ಸಂಖ್ಯೆಗಳ ಮೊತ್ತವು ಸಮಾನವಾಗುವಂತೆ ಗಡಿಯಾರವನ್ನು ಚಿತ್ರಿಸಿರಿ.

## ಕ್ಯಾಲೆಂಡರಿನ ಮೋಜು

- 9 ಕೋಣೆಗಳ ಸಂಖ್ಯೆಗಳ ಒಟ್ಟು ಮೊತ್ತವೆಷ್ಟು?
- ಇದರಂತೆ ಇನ್ನೊಂದನ್ನು ರಚಿಸಿ ಮೊತ್ತವನ್ನು ಕಂಡುಹಿಡಿಯಿರಿ.
- ನೀವು ಉತ್ತರವನ್ನು ಕಂಡುಹಿಡಿದ ವಿಧಾನವನ್ನು ಹೇಳಬಹುದೇ?

| SUN ಆದಿತ್ಯ | MON ಸೋಮ | TUE ಮಂಗಳ | WED ಬುಧ | THU ಗುರು | FRI ಶುಕ್ರ | SAT ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

- ಸಂಖ್ಯೆಗಳನ್ನು ಅಡ್ಡಕ್ಕೂ ನೀಟಕ್ಕೂ ಕೂಡಿಸಿ ನೋಡಿರಿ.
- ಇದರಂತೆ ಇನ್ನೊಂದನ್ನು ರಚಿಸಿ ಮೊತ್ತವನ್ನು ಕಂಡುಹಿಡಿಯಿರಿ.
- ನೀವು ಕಂಡುಕೊಂಡ ವಿಶೇಷತೆಗಳೇನು?

- ಕ್ಯಾಲೆಂಡರಿನ ಒಂದು ಭಾಗವನ್ನು ಕೆಳಗೆ ಕೊಡಲಾಗಿದೆ. ಅಳಿಸಿ ಹೋದ ತಾರೀಕುಗಳನ್ನು ಕಂಡುಹಿಡಿದು ಬರೆಯಿರಿ.

| | |
|---|---|
| 11 | 12 |
| 18 | 19 |


| | |
|---|---|
| | |
| | |

- ನಿಶಾಳು ರಾತ್ರಿ 9 ಗಂಟೆಗೆ ನಿದ್ರಿಸಲು ಮಲಗಿದಳು. ಬೆಳಗ್ಗೆ 5 ಗಂಟೆಗೆ ಎದ್ದಳು. ಹಾಗಾದರೆ ಅವಳು ಎಷ್ಟು ಗಂಟೆಗಳ ಕಾಲ ನಿದ್ರಿಸಿದಳು?
- 28 ನೇ ತಾರೀಕು ಬುಧವಾರವಾದರೆ ಅದೇ ತಿಂಗಳ 7 ನೇ ತಾರೀಕು ಯಾವ ದಿವಸವಾಗಿದೆ?
- 2013 ಫೆಬ್ರವರಿ 1 ನೇ ತಾರೀಕು ಶುಕ್ರವಾರವಾಗಿದೆ. ಈ ತಿಂಗಳಿನಲ್ಲಿ ಎಷ್ಟು ಶುಕ್ರವಾರಗಳಿರುವುದು?

# 3 ಸಾವಿರಗಳು ಸೇರುವಾಗ

## ಪುನಃ ಶಾಲೆಗೆ

ಶಾಲೆ ಆರಂಭವಾಯಿತು. ಪಿ.ಟಿ.ಎ. ಯವರ ವತಿಯಿಂದ ಎಲ್ಲರಿಗೂ ಲಡ್ಡು ವಿತರಣೆ ಮಾಡುವರು.




ಅನು ಮತ್ತು ಸನು ಟೀಚರಲ್ಲಿ ಹೇಳಿದುದನ್ನು ಕೇಳಿದಿರಲ್ಲವೇ?
ಒಟ್ಟು ಎಷ್ಟು ಲಡ್ಡುಗಳನ್ನು ಅವರು ವಿತರಿಸಿದರು?

ನಾನು ಕಂಡುಕೊಂಡ ವಿಧಾನ




ಸಹಪಾಠಿಗಳು ಕಂಡುಕೊಂಡ ವಿಧಾನ



## ಶಾಲಾ ಡಯರಿ

■ ಶಾಲೆಯಲ್ಲಿ ವಿತರಿಸುವುದಕ್ಕಾಗಿ 3 ಪ್ಯಾಕೇಟುಗಳಲ್ಲಿ ಡಯರಿಗಳನ್ನು ತಂದರು. ಡಯರಿಗಳ ಸಂಖ್ಯೆಯನ್ನು ಪ್ಯಾಕೇಟುಗಳ ಹೊರಗೆ ನಮೂದಿಸಲಾಗಿದೆ.




? ಡಯರಿಗಳ ಒಟ್ಟು ಸಂಖ್ಯೆ ಎಷ್ಟು?


....... + ....... + ....... = ..........

ಇದರಂತೆ 1000 ಡಯರಿಗಳನ್ನು ನೀವೂ ಮೂರು ಪ್ಯಾಕೇಟುಗಳಲ್ಲಿ ಇರಿಸಿರಿ. ಪ್ರತಿಯೊಂದು ಪ್ಯಾಕೇಟಿನಲ್ಲಿ ಎಷ್ಟು ಡಯರಿಗಳಿವೆ?

....... + ....... + ....... = 1000

ನಿಮ್ಮ ಸಹಪಾಠಿಗೋ

? ಸನುವೂ ಇದೇ ರೀತಿ ಡಯರಿಗಳನ್ನು 3 ಪ್ಯಾಕೇಟುಗಳಲ್ಲಿರಿಸಿದಳು. ಪ್ರತಿಯೊಂದು ಪ್ಯಾಕೇಟಿನಲ್ಲಿರುವ ಡಯರಿಗಳ ಸಂಖ್ಯೆ 325 ಮತ್ತು 340ರ ಎಡೆಯಲ್ಲಿ ಆಗಿತ್ತು. ಹಾಗಾದರೆ ಪ್ರತಿಯೊಂದು ಪ್ಯಾಕೇಟಿನಲ್ಲಿಯೂ ಇರುವ ಡಯರಿಗಳೆಷ್ಟು?





☐ + ☐ + ☐ = ☐

1000 ಡಯರಿಗಳನ್ನು 4 ಪ್ಯಾಕೇಟುಗಳಲ್ಲಿರಿಸಿದರೆ ಪ್ರತಿಯೊಂದರಲ್ಲಿಯೂ ಎಷ್ಟು ಡಯರಿಗಳಂತೆ ಇರಬಹುದು?

☐ ☐ ☐ ☐

## ತರಕಾರಿ ತೋಟ

■ ಶಾಲೆಯಲ್ಲಿ ತರಕಾರಿ ತೋಟ ನಿರ್ಮಿಸಲು ಮಕ್ಕಳು 1232 ರೂಪಾಯಿಯನ್ನೂ ಅಧ್ಯಾಪಕರು 1425 ರೂಪಾಯಿಯನ್ನೂ ನೀಡಿದರು. ಆದರೆ ಒಟ್ಟು ಎಷ್ಟು ರೂಪಾಯಿ ಲಭಿಸಿತು?




| | | | | |
|---|---|---|---|---|
| ಮಕ್ಕಳಿಂದ ಲಭಿಸಿದುದು |  |  |  |  |
| ಅಧ್ಯಾಪಕರಿಂದ ಲಭಿಸಿದುದು |  |  |  |  |
| ಒಟ್ಟು |  |  |  |  |
| | 2 ಸಾವಿರಗಳು | 6 ನೂರುಗಳು | 5 ಹತ್ತುಗಳು | 7 ಒಂದುಗಳು |

ಕ್ರಿಯಾ ವಿಧಾನ

$$\begin{array}{r} 1232\ + \\ 1425 \\ \hline 2657 \end{array}$$

## ಕುಡಿಯುವ ನೀರು

■ ಮಕ್ಕಳಿಗೆ ಕುದಿಸಿ ತಣಿಸಿದ ಕುಡಿಯುವ ನೀರನ್ನು ನೀಡಲು 3485 ರೂಪಾಯಿ ಬೆಲೆಯಿರುವ ದೊಡ್ಡ ಪಾತ್ರೆಗಳನ್ನೂ ಪದಾರ್ಥ ಬಡಿಸಲು ಬೇಕಾಗಿ 2145 ರೂಪಾಯಿ ಬೆಲೆಯಿರುವ ಸ್ಟೀಲ್ ಬಾಲ್ದಿಗಳನ್ನೂ ಬಿಸಿಯೂಟ ಸಮಿತಿಗೆ ಪಿಟಿಎಯವರು ಖರೀದಿಸಿ ಕೊಟ್ಟರು. ಇವುಗಳನ್ನು ಪಡೆದುಕೊಳ್ಳಲು ಒಟ್ಟು ಎಷ್ಟು ಹಣ ಖರ್ಚಾಯಿತು?

| | | | | |
|---|---|---|---|---|
| ಪಾತ್ರೆಗಳ ಕ್ರಯ |  |  |  |  |
| ಬಾಲ್ದಿಗಳ ಕ್ರಯ |  |  |  |  |
| ಒಟ್ಟು |  |  |  |  |
| | 5 ಸಾವಿರಗಳು | 5 ನೂರುಗಳು | 12 ಹತ್ತುಗಳು | 10 ಒಂದುಗಳು |
| | 5 ಸಾವಿರಗಳು | (1) 6 ನೂರು | (1) 3 ಹತ್ತುಗಳು | (1) 0 ಒಂದುಗಳು |
| | 5 ಸಾವಿರಗಳು | 6 ನೂರು | 3 ಹತ್ತುಗಳು | 0 ಒಂದುಗಳು |

ಇದನ್ನು ಹೀಗೆ ಬರೆಯಬಹುದು

| ಸಾವಿರಗಳು | ನೂರುಗಳು | ಹತ್ತುಗಳು | ಒಂದುಗಳು |
|---|---|---|---|
| | (1) | (1) | |
| 3 | 4 | 8 | 5 |
| 2 | 1 | 4 | 5 |
| 5 | 6 | (1) 3 | (1) 0 |

+


| ಬಾಯಿಲೆಕ್ಕವಾಗಿ ಕಂಡುಹಿಡಿಯಿರಿ | | |
|---|---|---|
| 1500 + 1500 | = | ......... |
| 2500 + 2500 | = | ......... |
| 3500 + 3500 | = | ......... |
| 1250 + 1250 | = | ......... |
| 1450 + 1450 | = | ......... |

ಕ್ರಿಯಾ ವಿಧಾನ

```
 11
3485 +
2145
-----
5630
```

## ಬೇಂಕಿಗೆ

- ಕಲಿಕಾ ಸಹಾಯ ನಿಧಿಗೆ ಲಭಿಸಿದ ಹಣವನ್ನು ಬೇಂಕಿನಲ್ಲಿ ಕಟ್ಟಲು ತೀರ್ಮಾನಿಸಲಾಯಿತು.




ಒಟ್ಟು ಎಷ್ಟು ಹಣ ಲಭಿಸಿತು?

ಹೇಗೆ ಕಂಡುಹಿಡಿಯುವಿರಿ?

- ಎಲ್.ಪಿ. ವಿಭಾಗದಿಂದ ಸಿಕ್ಕಿದ ಹಣ [ ]
- ಯು.ಪಿ. ವಿಭಾಗದಿಂದ ಸಿಕ್ಕಿದ ಹಣ [ ]

ಎಲ್. ಪಿ.
ವಿಭಾಗದಿಂದ



ಯು.ಪಿ.
ವಿಭಾಗದಿಂದ



ಒಟ್ಟು



| | | | | |
|---|---|---|---|---|
| ಅಂದರೆ | 7 ಸಾವಿರಗಳು | 14 ನೂರುಗಳು | 13 ಹತ್ತುಗಳು | 12 ಒಂದುಗಳು |
| | 1 | 1 | 1 | |
| | 8 ಸಾವಿರಗಳು | 1 5 ನೂರುಗಳು | 1 4 ಹತ್ತುಗಳು | 1 2 ಒಂದುಗಳು |
| ಇದನ್ನು | 8 ಸಾವಿರಗಳು | 5 ನೂರುಗಳು | 4 ಹತ್ತುಗಳು | 2 ಒಂದುಗಳು |

ಇದನ್ನು ಹೀಗೆ
ಬರೆಯಬಹುದು.


| ಸಾವಿರಗಳು | ನೂರುಗಳು | ಹತ್ತುಗಳು | ಒಂದುಗಳು | |
|---|---|---|---|---|
| 1 | 1 | 1 | | |
| 3 | 6 | 9 | 5 | + |
| 4 | 8 | 4 | 7 | |
| 8 | 1 5 | 1 4 | 1 2 | |

ಕ್ರಿಯಾ ವಿಧಾನ

```
 111
 3695 +
 4847
 ----
 8542
```

## ನೋಟು ಪುಸ್ತಕ

■ ಶಾಲೆಗೆ 'ನನ್ನ' ಕ್ಲಬ್ಬಿನ ವತಿಯಿಂದ 2345 ಖಾಲಿ ನೋಟು ಪುಸ್ತಕಗಳನ್ನೂ 4678 ಗೆರೆಯಿರುವ ನೋಟು ಪುಸ್ತಕಗಳನ್ನೂ ವಿತರಣೆ ಮಾಡಿದರು.




ಒಟ್ಟು ಎಷ್ಟು ನೋಟು ಪುಸ್ತಕಗಳನ್ನು ವಿತರಣೆ ಮಾಡಿದರು?

- ಹೇಗೆ ಕಂಡುಹಿಡಿಯುವಿರಿ?

  2345 ನ್ನು ಮತ್ತು 4678 ನ್ನು ಕೂಡಿಸಿದರೆ ಸಾಕು.

**2345 + 4678**


| | | | | | | |
|---|---|---|---|---|---|---|
| 2345 | = | 2000 + | 300 + | 40 + | 5 | 6000 + |
| 4678 | = | 4000 + | 600 + | 70 + | 8 | 900 |
| | | | | | | 110 |
| | | 6000 + | 900 + | 110 + | 13 → | 13 |
| | | | | | | 7023 |

| | | | |
|---|---|---|---|
| 2300 | + 45 | | 6900 |
| 4600 | + 78 | | 123 |
| 6900 | + 123 | → | 7023 |

| | | | |
|---|---|---|---|
| 2340 | + 5 | | 7010 + |
| 4670 | + 8 | | 13 |
| 7010 | + 13 | → | 7023 |

| | | | |
|---|---|---|---|
| 2345 + | 1 1 1 | 1 1 1 | 2 3 4 5 |
| 4678 | 2 3 4 5 + | 2 3 4 5 + | 4 6 7 8 |
| 13 | 4 6 7 8 | 4 6 7 8 | 6 9 1 3 |
| 110 | 7 (1)0 (1)2 (1)3 | 7 0 2 3 | 1 1 1 |
| 900 | | | 7 0 2 3 |
| 6000 | | | |
| 7023 | | | |


## ಬಾಯಿಲೆಕ್ಕವಾಗಿ ಮಾಡಿ ನೋಡಿರಿ





### ಕುರ್ಚಿ ಮತ್ತು ಮೇಜು

■ ಶಾಲೆಗೆ ಹೊಸದಾಗಿ ಖರೀದಿಸಿದ ಕುರ್ಚಿಗಳಿಗೆ 2980 ರೂಪಾಯಿಯೂ ಮೇಜುಗಳಿಗೆ 6420 ರೂಪಾಯಿಯೂ ಖರ್ಚಾಯಿತು. ಒಟ್ಟು ಎಷ್ಟು ಹಣ ಖರ್ಚಾಯಿತು?

ಹೇಗೆ ಕಂಡುಹಿಡಿಯುವಿರಿ?













### ಮಧ್ಯಾಹ್ನದೂಟ

? ಮಧ್ಯಾಹ್ನದೂಟಕ್ಕಾಗಿ ಜುಲಾಯಿ ತಿಂಗಳಲ್ಲಿ 1850 ಕಿಲೋಗ್ರಾಂ ಅಕ್ಕಿಯೂ ಅಗೋಸ್ತು ತಿಂಗಳಲ್ಲಿ 2050 ಕಿಲೋಗ್ರಾಂ ಅಕ್ಕಿಯೂ ಲಭಿಸಿತು. ಒಟ್ಟು ಎಷ್ಟು ಕಿಲೋಗ್ರಾಂ ಅಕ್ಕಿ ಲಭಿಸಿತು?




## ಉಳಿತಾಯ

? ಜೂನ್ ತಿಂಗಳಲ್ಲಿ 1400 ರೂಪಾಯಿಗಳನ್ನೂ ಜುಲಾಯಿ ತಿಂಗಳಲ್ಲಿ 1650 ರೂಪಾಯಿಗಳನ್ನೂ ಅನು ಬೇಂಕಿನಲ್ಲಿ ನಿಕ್ಷೇಪಿಸಿದನು. ಸಹಪಾಠಿ ಸನುವು ಜೂನ್ ತಿಂಗಳಿನಲ್ಲಿ ನಿಕ್ಷೇಪಿಸಿದ ಹಣವು ಅನುವಿಗಿಂತ 175 ರೂಪಾಯಿ ಅಧಿಕವಾಗಿತ್ತು. ಆದರೆ ಜುಲಾಯಿ ತಿಂಗಳಿನಲ್ಲಿ ಅನುವಿಗಿಂತ 75 ರೂಪಾಯಿ ಕಡಿಮೆಯಾಗಿತ್ತು. ಹಾಗಿದ್ದರೆ ಪ್ರತಿಯೊಬ್ಬರೂ ನಿಕ್ಷೇಪಿಸಿದ ಹಣವೆಷ್ಟು? ಯಾರು ನಿಕ್ಷೇಪಿಸಿದ ಹಣ ಹೆಚ್ಚು?

ಹೇಗೆ ಕಂಡುಹಿಡಿಯುವಿರಿ?

- 
- 

1 ರಿಂದ 8 ರ ವರೆಗಿನ ಸಂಖ್ಯೆಗಳನ್ನು ಈ ಕೆಳಗೆ ಕೊಡಲಾದ ಕೋಣೆಗಳಲ್ಲಿ ಬರೆಯಬೇಕು.
ಆದರೆ ಹತ್ತಿರದ ಸಂಖ್ಯೆಗಳು ಹತ್ತಿರದ ಕೋಣೆಗಳಲ್ಲಿ ಬರಬಾರದು.





| ನಾನು ನನ್ನ ಕುರಿತು | ಹೌದು | ಅಲ್ಲ |
|---|---|---|
| ಸಮಸ್ಯಾ ಪರಿಹಾರಗಳಿಗೆ ಯಾವ ಯಾವ ಕ್ರಿಯೆಗಳನ್ನು ಮಾಡಬಹುದೆಂದು ತಿಳಿಯಿತು. | | |
| ಎರಡನೇ ವ್ಯಕ್ತಿಯು ನಿಕ್ಷೇಪಿಸಿದ ಹಣವನ್ನು ಸುಲಭದಲ್ಲಿ ಹೇಗೆ ಕಂಡುಹಿಡಿಯಲು ಸಾಧ್ಯವೆಂದು ತಿಳಿದುಕೊಂಡೆನು. | | |
| ಕ್ರಿಯೆಗಳನ್ನು ಮಾಡಿದುದು ಸರಿಯೆಂದು ನಾನು ದೃಢಪಡಿಸಿಕೊಂಡೆನು. | | |
| ಉತ್ತರಕ್ಕೆ ತಲುಪಿದ ರೀತಿ ಮತ್ತು ಕ್ರಿಯಾ ವಿಧಾನವನ್ನು ಹೇಳಲು ಸಾಧ್ಯವಿದೆ. | | |

## ಮಾರಾಟ



| ದಿನ | ಮಾರಾಟ |
|---|---|
| ಸೋಮ | 2040 ರೂ. |
| ಮಂಗಳ | 865 ರೂ. |
| ಬುಧ | 2025 ರೂ. |
| ಗುರು | 1890 ರೂ. |
| ಶುಕ್ರ | 2400 ರೂ. |

■ ಶಾಲಾ ಸೊಸೈಟಿಯ ಒಂದು ವಾರದ ಮಾರಾಟವನ್ನು ನೋಡಿರಿ.

? ವಾರದ ಮೊದಲ ಎರಡು ದಿನಗಳಲ್ಲಿ ಒಟ್ಟು ಎಷ್ಟು ರೂಪಾಯಿಯ ಮಾರಾಟ ನಡೆಯಿತು?

? ವಾರದ ಕೊನೆಯ ಎರಡು ದಿನಗಳಲ್ಲಿ ಒಟ್ಟು ಎಷ್ಟು ರೂಪಾಯಿಯ ಮಾರಾಟ ನಡೆಯಿತು?

? ಆ ವಾರದಲ್ಲಿ ಒಟ್ಟು ಎಷ್ಟು ರೂಪಾಯಿಯ ಮಾರಾಟ ನಡೆಯಿತು?

? ಅತೀ ಹೆಚ್ಚು ಮಾರಾಟವಾದ ದಿನ ಯಾವುದು?

? ಶಾಲಾ ಸೊಸೈಟಿಯ ಪ್ರತೀ ದಿನದ ಮಾರಾಟವನ್ನು ಕ್ರಮಪ್ರಕಾರ ಬರೆಯಿರಿ.

## ಮಧ್ಯಾಹ್ನದೂಟ

ಶಾಲೆಯಲ್ಲಿ ಮಧ್ಯಾಹ್ನದೂಟ ತಯಾರಿಸಲು ತೆಗೆದುಕೊಂಡ ತರಕಾರಿಯ ಬೆಲೆಯನ್ನು ನೋಡಿರಿ.

ಜೂನ್ ತಿಂಗಳಿನಲ್ಲಿ 2715 ರೂಪಾಯಿಯ ತರಕಾರಿಗಳನ್ನು ಖರೀದಿಸಿದರು. ಅಗೋಸ್ತು ತಿಂಗಳಲ್ಲಿ ಜೂನ್ ತಿಂಗಳಿಗಿಂತ 675 ರೂಪಾಯಿ ಅಧಿಕ ಬೆಲೆಯ ಮತ್ತು ಜುಲಾಯಿ ತಿಂಗಳಲ್ಲಿ ಅಗೋಸ್ತು ತಿಂಗಳಿಗಿಂತ 175 ರೂಪಾಯಿ ಕಡಿಮೆ ಬೆಲೆಯ ತರಕಾರಿಗಳನ್ನು ಖರೀದಿಸಲಾಯಿತು. ಸೆಪ್ಟಂಬರ್ ತಿಂಗಳಲ್ಲಿ ಜೂನ್ ತಿಂಗಳಿಗಿಂತ 275 ರೂಪಾಯಿ ಅಧಿಕ ಬೆಲೆಯ ತರಕಾರಿಗಳನ್ನು ಖರೀದಿಸಲಾಯಿತು.


? ಪ್ರತಿಯೊಂದು ತಿಂಗಳಿನಲ್ಲಿ ಎಷ್ಟು ಬೆಲೆಯ ತರಕಾರಿಗಳನ್ನು ಖರೀದಿಸಲಾಯಿತು.?

? ಯಾವ ತಿಂಗಳಲ್ಲಿ ಹೆಚ್ಚು ಖರ್ಚಾಯಿತು? ಕಡಿಮೆಯೋ?

? ನಾಲ್ಕು ತಿಂಗಳುಗಳಿಗೆ ಖರೀದಿಸಿದ ತರಕಾರಿಗಳ ಒಟ್ಟು ಬೆಲೆ ಎಷ್ಟು?

## ಉಚಿತ ಅಕ್ಕಿ ವಿತರಣೆ

■ ಓಣಂ ಹಬ್ಬದ ಪ್ರಯುಕ್ತ ಉಚಿತವಾಗಿ 5 ಕಿ.ಲೋ ಗ್ರಾಂ ಅಕ್ಕಿಯನ್ನು ವಿತರಿಸುವರು.




? ಒಟ್ಟು ಎಷ್ಟು ಕಿಲೋಗ್ರಾಂ ಅಕ್ಕಿಯನ್ನು ವಿತರಣೆಗಾಗಿ ತರಲಾಯಿತು?


ಎರಡು ದಿನಗಳಲ್ಲಿ 5000 ಕಿಲೋಗ್ರಾಂ ಅಕ್ಕಿಯನ್ನು ವಿತರಿಸಲಾಯಿತು. ಮೊದಲ ದಿನಕ್ಕಂತ 1000 ಕಿಲೋಗ್ರಾಂ ಹೆಚ್ಚು ಎರಡನೇ ದಿನ ವಿತರಿಸಲಾಯಿತು.

? ಹಾಗಾದರೆ ಪ್ರತಿಯೊಂದು ದಿನ ಎಷ್ಟು ಕಿಲೋಗ್ರಾಂ ಅಕ್ಕಿಯನ್ನು ವಿತರಣೆ ಮಾಡಲಾಯಿತು?

## ಹಾಲು ವಿತರಣೆ

- ಶಾಲೆಗೆ ಹಾಲು ವಿತರಣೆ ಮಾಡುವುದು ಹಾಲು ಉತ್ಪಾದಕರ ಸಂಘವಾಗಿದೆ.

- ? ಹಾಲು ಉತ್ಪಾದಕರ ಸಂಘಕ್ಕೆ ಎರಡೂ ವಾರಗಳಿಗೆ ಸೇರಿ ಒಟ್ಟು ಎಷ್ಟು ಹಣವನ್ನು ಕೊಡಬೇಕು?




## ಸಂಖ್ಯಾನಮೂನೆಯನ್ನು ಪೂರ್ತಿಗೊಳಿಸೋಣ

- 1221, 1222, 1223, 1224, .........., .........., ..........
- 1221, 1231, 1241, 1251, .........., .........., ..........
- 1221, 1321, 1421, 1521, .........., .........., ..........
- 1221, 2221, 3221, 4221, .........., .........., ..........
- 1221, 1232, 1243, 1254, .........., .........., ..........
- 1221, 1332, 1443, 1554, .........., .........., ..........,
- 1221, 2332, 3443, 4554, .........., .........., ..........,

- 4325 ರಿಂದ ಆರಂಭವಾಗುವ 4 ವಿಭಿನ್ನ ನಮೂನೆಗಳನ್ನು ನಿರ್ಮಿಸಿರಿ.

ಕೆಳಗೆ ಕೊಟ್ಟಿರುವ ಸಂಖ್ಯೆಗಳನ್ನುಪಯೋಗಿಸಿ ಮಾಯಾಚೌಕವೊಂದನ್ನು ರಚಿಸಿರಿ.

1054, 3390, 2806, 1638, 3098, 2514, 1930, 1346, 2222

| | | |
|---|---|---|
| | | |
| | 2222 | |
| | | |

### ಬಾಯಿಲೆಕ್ಕವಾಗಿ ಕಂಡುಹಿಡಿಯುವ

450 + 475 = 450 + 450 + 25

ಎರಡು ಸಲ 450 ಮತ್ತು ಒಂದು ಸಲ 25=925

1500 + 1525 = ?

2500 + 2547 = ?

1250 + 1270 = ?

1450 + 1350 = ?

## ಮಾಯಾಚೌಕ

■ ಮಾಯಾಚೌಕದಲ್ಲಿ ಒಂದು ಕೋಣೆಯಲ್ಲಿ ಬರೆದಿರುವ ಸಂಖ್ಯೆಯು ಸರಿಯಲ್ಲ. ಆ ಸಂಖ್ಯೆ ಯಾವುದೆಂದು ಕಂಡುಹಿಡಿಯಿರಿ.

| | | |
|---|---|---|
| 4150 | 1875 | 3500 |
| 2525 | 3175 | 3825 |
| 4850 | 4475 | 2200 |

? ಕೋಣೆಗಳನ್ನು ಅಡ್ಡಕ್ಕೂ, ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿ ನೋಡಿರಿ.

## ವಸ್ತ್ರ ಮೇಳ

| | |
|---|---|
| ಸಲ್ವಾರ್ ಕಮ್ಮೀಸ್ | 1340 ರೂ., 1280 ರೂ., 1400 ರೂ. |
| ಚೂರಿದಾರ್ | 1525 ರೂ., 1600 ರೂ., 1575 ರೂ. |
| ಸಾರಿ | 1775 ರೂ., 1975 ರೂ., 1860 ರೂ. |



? ಸುಲೈಖಳ ಕೈಯಲ್ಲಿ 3500 ರೂಪಾಯಿಯೂ ಅಂಜುವಿನ ಕೈಯಲ್ಲಿ 3200 ರೂಪಾಯಿಯೂ ಲಿಸಿಯ ಕೈಯಲ್ಲಿ 3350 ರೂಪಾಯಿಯೂ ಇದೆ. ಕೈಯಲ್ಲಿದ್ದ ಎಲ್ಲಾ ಹಣದಿಂದ ಅವರು ಪ್ರತಿಯೊಬ್ಬರೂ ಎರಡು ಬಟ್ಟೆಗಳನ್ನು ಖರೀದಿಸಿದರು. ಅವುಗಳು ಯಾವುದಾಗಿರಬಹುದು?

| ಸುಲೈಖಾ | ಅಂಜು | ಲಿಸಿ |
|---|---|---|
| | | |
| | | |
| 3500 | 3200 | 3350 |

? ಮೂರು ವಿಧದ ಬಟ್ಟೆಗಳಲ್ಲಿ ಒಂದೊಂದನ್ನು ಖರೀದಿಸಿದರೆ ಅತೀ ಕಡಿಮೆ ಹಣ ಎಷ್ಟಾಗಬಹುದು? ☐

## ಮೂರು ವಸ್ತುಗಳನ್ನು ಪಡೆದುಕೊಳ್ಳುವ

■ ಸಾರಂಗನ ಕೈಯಲ್ಲಿ 8000 ರೂಪಾಯಿಗಳಿವೆ.




| | | | |
|---|---|---|---|
| • ಮಿಕ್ಸಿ | 3450 ರೂ. | • ಪ್ರಶರ್ ಕುಕ್ಕರ್ | 3755 ರೂ. |
| • ಟೋರ್ಚ್ | 1305 ರೂ. | • ಗ್ಯಾಸ್ ಸ್ಟೌ | 3245 ರೂ. |
| • ಇಸ್ತ್ರಿಪೆಟ್ಟಿಗೆ | 1000 ರೂ. | • ಫೇನ್ | 3550 ರೂ. |

**?** ಕೈಯಲ್ಲಿದ್ದ ಪೂರ್ತಿ ಹಣದಿಂದ ಸಾರಂಗ್ 3 ವಸ್ತುಗಳನ್ನು ಖರೀದಿಸಿದನು. ಅವುಗಳು ಯಾವುದಾಗಿರಬಹುದು?

ನಾನು ಕಂಡುಕೊಂಡ ವಿಧಾನ





**?** 1 ರಿಂದ 10 ರ ವರೆಗಿನ ಅನುಕ್ರಮವಾದ ಎಣಿಕಾ ಸಂಖ್ಯೆಗಳ ಮೊತ್ತ ಎಷ್ಟು?

**?** 11 ರಿಂದ 20 ವರೆಗಿನ ಅನುಕ್ರಮವಾದ ಎಣಿಕಾ ಸಂಖ್ಯೆಗಳ ಮೊತ್ತವೋ? ನೀವು ಹೇಗೆ ಕಂಡುಹಿಡಿದಿರಿ?

**?** 41 ರಿಂದ ಅನುಕ್ರಮವಾಗಿ ಬರುವ 10 ಎಣಿಕಾ ಸಂಖ್ಯೆಗಳ ಮೊತ್ತ ಎಷ್ಟು?

## ನಿಕ್ಷೇಪಿಸಿದ ಹಣ

ಬಾಬುವಿಗೆ 1420 ರೂಪಾಯಿಗಳ ನಾಫಿಯಳಿಗೆ 1580 ರೂಪಾಯಿಗಳ ಜೋಣಿಗೆ 1605 ರೂಪಾಯಿಗಳ ಬೇಂಕು ಠೇವಣಿಗಳಿವೆ. ಬಾಬುವಿನ ಮತ್ತು ನಾಫಿಯಳ ಠೇವಣಿಗಳ ಒಟ್ಟು ಮೊತ್ತದ ಅರ್ಧ ಮಾತ್ರ ಸಿತಾರಳ ಠೇವಣಿಯಾಗಿದೆ.

ಜೋಣಿ ಮತ್ತು ನಾಫಿಯಳ ಒಟ್ಟು ಠೇವಣಿಯೊಂದಿಗೆ 120 ರೂಪಾಯಿಯನ್ನು ಕೂಡಿಸಿದರೆ ಬಿಂದುವಿನ ಠೇವಣಿಯಾಗುವುದು.

ತಾಹಿರಳ ಠೇವಣಿಯು ಸಿತಾರಳ ಮತ್ತು ಬಿಂದುವಿನ ಠೇವಣಿಯ ಒಟ್ಟು ಮೊತ್ತಕ್ಕೆ ಸಮಾನವಾಗಿರುತ್ತದೆ.

? ಹಾಗಾದರೆ ತಾಹಿರಳು ನಿಕ್ಷೇಪಿಸಿದ ಹಣ ಎಷ್ಟು?

ಕೊಟ್ಟಿರುವ ಮಾಹಿತಿಗಳ ಆಧಾರದಲ್ಲಿ ಸಹಪಾಠಿಗಳಲ್ಲಿ ಕೇಳಲು ಕೆಲವು ಪ್ರಶ್ನೆಗಳನ್ನು ತಯಾರಿಸಿರಿ.

- ಕಡಿಮೆ ಠೇವಣಿ ಯಾರದ್ದು?
- 
- 
- 

### ದೊಡ್ಡದು ಮತ್ತು ಸಣ್ಣದು

ಅತೀ ದೊಡ್ಡ ಎರಡಂಕೆ ಸಂಖ್ಯೆಯನ್ನೂ ಅತೀ ದೊಡ್ಡ ಒಂದಂಕೆ ಸಂಖ್ಯೆಯನ್ನೂ ಕೂಡಿಸಿದರೆ

99 + 9 = .........

ಅತೀ ದೊಡ್ಡ ಮೂರಂಕೆ ಸಂಖ್ಯೆಯನ್ನೂ ಅತೀ ದೊಡ್ಡ ಎರಡಂಕೆ ಸಂಖ್ಯೆಯನ್ನೂ ಕೂಡಿಸಿದರೆ

........... + ........... = ...................

ಅತೀ ದೊಡ್ಡ ನಾಲ್ಕಂಕೆ ಸಂಖ್ಯೆಯನ್ನೂ ಅತೀ ದೊಡ್ಡ ಮೂರಂಕೆ ಸಂಖ್ಯೆಯನ್ನೂ ಕೂಡಿಸಿದರೆ?

.......... + ........... = ..................

ಅತೀ ದೊಡ್ಡ ಎರಡಂಕೆ ಸಂಖ್ಯೆಯನ್ನೂ ಅತೀ ಸಣ್ಣ ಎರಡಂಕೆ ಸಂಖ್ಯೆಯನ್ನೂ ಕೂಡಿಸಿದರೆ

99 + 10 = 109

ಅತೀ ದೊಡ್ಡ ಮೂರಂಕೆ ಸಂಖ್ಯೆಯನ್ನೂ ಅತೀ ಸಣ್ಣ ಮೂರಂಕೆ ಸಂಖ್ಯೆಯನ್ನೂ ಕೂಡಿಸಿದರೆ

999 + 100 = .........

ಅತೀ ದೊಡ್ಡ ನಾಲ್ಕಂಕೆ ಸಂಖ್ಯೆಯನ್ನೂ ಅತೀ ಸಣ್ಣ ನಾಲ್ಕಂಕೆ ಸಂಖ್ಯೆಯನ್ನೂ ಕೂಡಿಸಿದರೆ?

......... + ......... = .........

## ಅಭಿವೃದ್ಧಿ ನಿಧಿ


? ಶಾಲಾ ಅಭಿವೃದ್ಧಿ ನಿಧಿಗೆ ಪಿಟಿಎ ಸದಸ್ಯರು 5 ಗುಂಪುಗಳಾಗಿ ಹಣವನ್ನು ಸಂಗ್ರಹಿಸಿದರು. ಮೂರನೇ ಗುಂಪಿನವರು ಸಂಗ್ರಹಿಸಿದ ಹಣವು ಒಂದನೇ ಗುಂಪಿನವರಿಗಿಂತ 600ರೂಪಾಯಿಯೂ, ಎರಡನೇ ಗುಂಪಿನವರಿಗಿಂತ 400 ರೂಪಾಯಿಯೂ ಅಧಿಕವಾಗಿತ್ತು. ಆದರೆ 5 ನೇ ಗುಂಪಿನವರಿಗೆ 4 ನೇ ಗುಂಪಿನವರಿಗಿಂತ 550 ರೂಪಾಯಿ ಅಧಿಕವೂ, 3ನೇ ಗುಂಪಿನವರಿಗೆ 4 ನೇ ಗುಂಪಿನವರಿಗಿಂತ 200 ರೂಪಾಯಿ ಕಡಿಮೆಯೂ ಆಗಿತ್ತು. 4 ನೇ ಗುಂಪು 4200 ರೂಪಾಯಿ ಸಂಗ್ರಹಿಸಿದ್ದರೆ, ಉಳಿದ ಗುಂಪುಗಳು ಸಂಗ್ರಹಿಸಿದ ಹಣ ಎಷ್ಟು? ಒಟ್ಟು ಎಷ್ಟು ಹಣ ಲಭಿಸಿತು?

### ಬಾಯಿಲೆಕ್ಕವಾಗಿ ಕಂಡುಹಿಡಿಯುವ

- 3747 + 2836 = 6583 ಆಗಿದೆ.

  ಕೆಳಗೆ ಕೊಟ್ಟವುಗಳನ್ನು ಬಾಯಿಲೆಕ್ಕವಾಗಿ ಮಾಡಿರಿ.
  - 3749 + 2834 = ?
  - 3749 + 2839 = ?
  - 3746 + 2834 = ?
  - 3746 + 2839 = ?
- 5469 + 2537 = 8006 ಆಗಿದೆ.
  - 5437 + 2569 = ?
  - 5539 + 2467 = ?
  - 2569 + 5437 = ?

### ದಾಳದ ಆಟ




ಇದು ಇಬ್ಬರು ಆಡುವ ಆಟವಾಗಿದೆ. ಯಾವುದಾದರೂ ಖಾಲಿಯಿರುವ ಕೋಣೆಯಲ್ಲಿ ದಾಳವನ್ನು ಇರಿಸುವ. ಒಂದು ಕೋಣೆಯಿಂದ ಹತ್ತಿರದ ಯಾವ ಕೋಣೆಗೆ ಬೇಕಾದರೂ ದಾಳವನ್ನು ಸರಿಸಬಹುದು. ಆದರೆ ಮೂಲೆಯಿಂದ ಮೂಲೆಗೆ ಸರಿಸಬಾರದು. ಬಣ್ಣ ಹಚ್ಚಿದ ಕೋಣೆಗಾಗಲೀ ಒಮ್ಮೆ ಸರಿಸಿದ ಕೋಣೆಗಾಗಲೀ ದಾಳವನ್ನು ಸರಿಸಬಾರದು. ದಾಳವನ್ನು ಸರಿಸಿದ ಕೋಣೆಗಳಲ್ಲಿರುವ ಸಂಖ್ಯೆಗಳ ಮೊತ್ತವು ನಿಮಗೆ ಸಿಗುವ ಅಂಕವಾಗಿದೆ. ಹೆಚ್ಚು ಅಂಕ ಲಭಿಸಿದವರು ವಿಜಯಿಯಾಗುವರು.

## ಆಯವ್ಯಯ

ಓಣಂ ಹಬ್ಬದ ಪ್ರಯುಕ್ತ ಕುಟುಂಬಶ್ರೀ ಯವರು ನಡೆಸುವ 3 ಸ್ಟಾಲುಗಳು 4 ದಿವಸಗಳ ಕಾಲ ಕಾರ್ಯಾಚರಿಸಿದುವು. ಒಂದನೇ ಸ್ಟಾಲಿನಿಂದ 3405, 3528, 3780, 3500 ರೂಪಾಯಿಗಳೂ, ಎರಡನೇ ಸ್ಟಾಲಿನಿಂದ 2966, 3600, 4250, 3497 ರೂಪಾಯಿಗಳೂ, ಮೂರನೇ ಸ್ಟಾಲಿನಿಂದ 2998, 3570, 4306, 3100 ರೂಪಾಯಿಗಳೂ ನಾಲ್ಕು ದಿವಸಗಳಲ್ಲಿ ಸಂಗ್ರಹವಾದುವು.

ನೀಡಿರುವ ಅಂಕಿಅಂಶಗಳನ್ನು ಪಟ್ಟಿಮಾಡಿರಿ




? ಹೆಚ್ಚು ಆದಾಯ ಲಭಿಸಿದ ಸ್ಟಾಲ್ ಯಾವುದು?

? ಹೆಚ್ಚು ಆದಾಯ ಲಭಿಸಿದ ದಿನ ಯಾವುದು?

# ಹೆಚ್ಚು ಮತ್ತು ಕಡಿಮೆ 4

## ಇನ್ನೆಷ್ಟು ದೂರ

ಪೂಮಲೆ ಶಾಲೆಯಿಂದ ತಿರುವನಂತಪುರಕ್ಕೆ ಶೈಕ್ಷಣಿಕ ಪ್ರವಾಸಕ್ಕೆ ಹೋಗುವರು. ಶಾಲೆಯಿಂದ ತಿರುವನಂತಪುರಕ್ಕೆ 496 ಕಿಲೋಮೀಟರ್ ದೂರವಿದೆ. ಅವರು 85 ಕಿಲೋಮೀಟರ್ ಪ್ರಯಾಣಿಸಿ ಕೋಝಿಕ್ಕೋಡಿಗೆ ತಲುಪಿದರು.




? ಇನ್ನು ತಿರುವನಂತಪುರಕ್ಕೆ ತಲುಪಲು ಎಷ್ಟು ದೂರ ಪ್ರಯಾಣಿಸಬೇಕು? [ ]

ಅವರು ಮಧ್ಯಾಹ್ನದೂಟವನ್ನು ಎರ್ನಾಕುಳಂನಲ್ಲಿ ಮಾಡಿ ಮುಗಿಸಿದರು. ಆಗ ಅವರು ಕೋಝಿಕ್ಕೋಡಿನಿಂದ 188 ಕಿಲೋ ಮೀಟರ್ ದೂರ ಪ್ರಯಾಣಿಸಿದ್ದರು.

? ತಿರುವನಂತಪುರಕ್ಕೆ ಇನ್ನು ಎಷ್ಟು ದೂರವಿದೆ? [ ]

ಶೈಕ್ಷಣಿಕ ಪ್ರವಾಸದ ನಂತರ ಅವರು ಕೋಟಯಂ ದಾರಿಯಾಗಿ ಹಿಂತಿರುಗಿದರು. ತಿರುವನಂತಪುರಂನಿಂದ ಕೋಟಯಂ ದಾರಿಯಾಗಿ ಪೂಮಲೆಗೆ 502 ಕಿಲೋಮೀಟರ್ ದೂರವಿದೆ. ತಿರುವನಂತಪುರದಿಂದ ಕೋಟಯಂಗೆ 151 ಕಿಲೋಮೀಟರ್ ದೂರವಿದೆ.

? ಕೋಟಯಂನಿಂದ ಪೂಮಲೆಗೆ ತಲುಪಲು ಎಷ್ಟು ಕಿಲೋಮೀಟರ್ ಪ್ರಯಾಣಿಸಬೇಕು? ☐


## ಆಹಾರದ ಖರ್ಚು

ಮೂರು ದಿನಗಳ ಶೈಕ್ಷಣಿಕ ಪ್ರವಾಸಕ್ಕೆ ಆಹಾರಕ್ಕಾಗಿ 8540 ರೂಪಾಯಿಯನ್ನು ಮೀಸಲಿರಿಸಿದ್ದರು. ಮೊದಲ ದಿನದ ಆಹಾರಕ್ಕಾಗಿ 2326 ರೂಪಾಯಿಯ ಖರ್ಚಾಯಿತು.

? ಬಾಕಿ ಎಷ್ಟು ಹಣ ಇದೆ?

8540 –
2326

| | | | | | | |
|---|---|---|---|---|---|---|
| 8000 | + | 500 | + | 40 | – |
| 2000 | + | 300 | + | 26 | |
| 6000 | + | 200 | + | 14 | |








6214 ರೂಪಾಯಿ ಬಾಕಿ ಉಳಿಯುತ್ತದೆ.

ಎರಡನೇ ದಿನ 3344 ರೂಪಾಯಿ ಖರ್ಚಾಯಿತು.

ಇನ್ನು ಎಷ್ಟು ಹಣ ಬಾಕಿ ಇದೆ?







6214 –
3344

| | | | | | | | | |
|---|---|---|---|---|---|---|---|---|
| 6000 | + | 200 | + | 10 | + | 4 | – |
| 3000 | + | 300 | + | 40 | + | 4 | |
| 6000 | + | 100 | + | 110 | + | 4 | – |
| 3000 | + | 300 | + | 40 | + | 4 | |
| 5000 | + | 1100 | + | 110 | + | 4 | – |
| 3000 | + | 300 | + | 40 | + | 4 | |
| **2000** | **+** | **800** | **+** | **70** | **+** | **0** | |




2870 ರೂಪಾಯಿ ಉಳಿಯಬಹುದು.

| ಸಾವಿರಗಳು | ನೂರುಗಳು | ಹತ್ತುಗಳು | ಒಂದುಗಳು |
|---|---|---|---|
| | **1** | **10** | |
| 6 | ~~2~~ 1 | 1 | 4 |
| 3 | 3 | 4 | 4 |
| | | | |

→

| ಸಾವಿರಗಳು | ನೂರುಗಳು | ಹತ್ತುಗಳು | ಒಂದುಗಳು |
|---|---|---|---|
| 6 | 1 | 11 | 4 |
| 3 | 3 | 4 | 4 |
| | | | |

→

| ಸಾವಿರಗಳು | ನೂರುಗಳು | ಹತ್ತುಗಳು | ಒಂದುಗಳು |
|---|---|---|---|
| **5** | **10** | | |
| ~~6~~ 1 | 1 | 11 | 4 |
| 3 | 3 | 4 | 4 |
| | | | |

→

| ಸಾವಿರಗಳು | ನೂರುಗಳು | ಹತ್ತುಗಳು | ಒಂದುಗಳು |
|---|---|---|---|
| 5 | 11 | 11 | 4 |
| 3 | 3 | 4 | 4 |
| 2 | 8 | 7 | 0 |

## ಕ್ರಿಯಾ ವಿಧಾನ


ಇವೆಲ್ಲವನ್ನೂ ಒಟ್ಟಿಗೆ ಕ್ರಿಯೆ ಮಾಡಿದರೊ.

| | | | | |
|---|---|---|---|---|
| **5** | **11** | **11** | | |
| ~~6~~ 1 | ~~2~~ 1 | 1 | 4 | – |
| 3 | 3 | 4 | 4 | |
| 2 | 8 | 7 | 0 | |

$$\begin{array}{r} 6214\ - \\ 3344 \\ \hline \mathbf{2870} \end{array}$$

ಮೂರನೆ ದಿನಕ್ಕೆ 2870 ರೂಪಾಯಿ ಬಾಕಿ ಇದೆ.

### ವಿಶೇಷತೆಯನ್ನು ಕಂಡುಹಿಡಿಯಿರಿ




ಇದೇ ರೀತಿಯಲ್ಲಿ ಚುಕ್ಕಿಗಳನ್ನು ಮಾಡಿ ನಂತರ ಬರುವ ಚಿತ್ರಗಳನ್ನು ಸೂಚಿಸುವ ಸಂಖ್ಯೆಗಳನ್ನು ಕ್ರಮದಲ್ಲಿ ಬರೆಯಿರಿ.

ಒಂದೇ ಸ್ಥಾನದಲ್ಲಿರುವ ಸಂಖ್ಯೆಗಳಲ್ಲಿ ದೊಡ್ಡದರಿಂದ ಸಣ್ಣದನ್ನು ಕಳೆದು ಕ್ರಮದಲ್ಲಿ ಬರೆಯಿರಿ.

ಉದಾ : $1 - 1 = 0$,

$4 - 3 = 1$

ಲಭಿಸಿದ ನಮೂನೆಯ ವಿಶೇಷತೆಯೇನು?

? ಮೂರನೆಯ ದಿನ ಆಹಾರಕ್ಕೆ 3000 ರೂಪಾಯಿ ಖರ್ಚಾಯಿತು. ಆಹಾರಕ್ಕಾಗಿ ತೆಗೆದಿರಿಸಿದ ಹಣಕ್ಕಿಂತ ಎಷ್ಟು ಹಣ ಹೆಚ್ಚು ಖರ್ಚಾಯಿತು?

2870 ರೂಪಾಯಿ ಬಾಕಿ ಇತ್ತು. 3000 ರೂಪಾಯಿ ಖರ್ಚಾಯಿತು..

2870 ಕ್ಕಿಂತ ಎಷ್ಟು ಹೆಚ್ಚಾಗಿದೆ 3000?

2870 ಕ್ಕೆ 30ನ್ನು ಕೂಡಿಸಿದರೆ 2900 ಸಿಗುವುದು?


2900 ರೊಂದಿಗೆ ಎಷ್ಟು ಕೂಡಿಸಿದರೆ 3000 ಸಿಗಬಹುದು? [ ]

ಒಟ್ಟು ಎಷ್ಟು ಹೆಚ್ಚು? [ ]

ಮತ್ತೊಂದು ವಿಧಾನ :

3000 –
2870
―――

→ 3000 – 1 → 2999 –
2870 – 1 → 2869
―――
130




? ಇದೇ ರೀತಿ 5000ದಿಂದ 3407 ನ್ನು ಕಳೆಯಿರಿ.

## ಎಷ್ಟು ಮಕ್ಕಳು


? ಪೂಮಲೆ ಶಾಲೆಯಲ್ಲಿ ಕಳೆದ ವರ್ಷ 1248 ಮಕ್ಕಳಿದ್ದರು. ಅವರಲ್ಲಿ 98 ಮಂದಿ ಶಾಲೆಯಿಂದ ಹೋದರು. 125 ಮಂದಿ ಹೊಸದಾಗಿ ಸೇರಿದರು. ಆದರೆ ಈ ವರ್ಷ ಶಾಲೆಯಲ್ಲಿ ಎಷ್ಟು ಮಕ್ಕಳಿದ್ದಾರೆ?

ನಾನು ಕಂಡುಕೊಂಡ ವಿಧಾನ






? ಪೂಮಲೆ ಶಾಲೆಗೆ ಈ ವರ್ಷ 1 ನೇ ತರಗತಿಗೆ ಮೊದಲು ಸೇರಿದ ಮಗುವಿನ ದಾಖಲಾತಿ ಸಂಖ್ಯೆ 3946 ಆಗಿದೆ. ಕೊನೆಗೆ ಸೇರಿದ ಮಗುವಿನ ಸಂಖ್ಯೆ 4007 ಆಗಿದೆ. ಹಾಗಾದರೆ ಈಗ ಒಂದನೇ ತರಗತಿಯಲ್ಲಿ ಒಟ್ಟು ಎಷ್ಟು ಮಕ್ಕಳು ಇದ್ದಾರೆ?








ಕಳೆದ ವರ್ಷ ಕೊನೆಗೆ ಸೇರಿದ ಮಗುವಿನ ದಾಖಲಾತಿ ಸಂಖ್ಯೆ ಎಷ್ಟು?

[ ]

ಇನ್ನು ಈ ವರ್ಷ ಎಷ್ಟು ಮಕ್ಕಳು ಸೇರಿದ್ದಾರೆ ಎಂದು ಕಂಡುಹಿಡಿಯಬಹುದಲ್ಲವೇ?

## ನನ್ನ ಮರ

'ನನ್ನ ಮರ' ಯೋಜನೆಯ ಅಂಗವಾಗಿ ಪೂಮಲೆ ಶಾಲೆಗೆ 1042 ಗಿಡಗಳು ಲಭಿಸಿದುವು. ಅವುಗಳಲ್ಲಿ 342 ಸಾಗುವಾನಿ ಗಿಡಗಳೂ 167 ಮಾವಿನ ಗಿಡಗಳೂ 257 ಮಹಾಗನಿ ಗಿಡಗಳೂ 8 ಗಂಧದ ಗಿಡಗಳೂ ಉಳಿದವುಗಳು ಹಲಸಿನ ಗಿಡಗಳೂ ಆಗಿದ್ದುವು.




? ಒಟ್ಟು ಎಷ್ಟು ಗಿಡಗಳನ್ನು ಮಕ್ಕಳಿಗೆ ವಿತರಿಸಲಾಯಿತು?

? ಎಷ್ಟು ಹಲಸಿನ ಗಿಡಗಳು ಲಭಿಸಿವೆ?

? ಮೂರು ತಿಂಗಳು ಕಳೆದಾಗ ಮಕ್ಕಳಿಗೆ ವಿತರಿಸಿದ ಗಿಡಗಳಲ್ಲಿ 68 ಗಿಡಗಳು ನಾಶವಾದುವು. ಈಗ ಬಾಕಿ ಇರುವ ಗಿಡಗಳೆಷ್ಟು?

**ನಾನು ಕಂಡುಕೊಂಡ ವಿಧಾನ**

**ಸಹಪಾಠಿಗಳು ಕಂಡುಕೊಂಡ ವಿಧಾನ**

| ನಾನು ನನ್ನ ಕುರಿತು | ಹೌದು | ಅಲ್ಲ |
|---|---|---|
| ಏನನ್ನು ಕಂಡುಕೊಳ್ಳಬೇಕೆಂದು ತಿಳಿಯಿತು. | | |
| ಹೇಗೆ ಕಂಡುಕೊಳ್ಳಬೇಕೆಂದು ತಿಳಿಯಿತು. | | |
| ಕ್ರಿಯೆಗಳನ್ನು ಬಾಯಿಲೆಕ್ಕವಾಗಿ ಮಾಡಲು ಸಾಧ್ಯವಾಯಿತು. | | |
| ಕ್ರಿಯೆಯನ್ನು ಸರಿಯಾಗಿ ಮಾಡಿದೆನು. | | |

ಮಕ್ಕಳ ದಿನಾಚರಣೆಯ ಅಂಗವಾಗಿ ಅಮಲ್‌ನ ತರಗತಿಯಲ್ಲಿ 40 ಸ್ಟೇಂಪುಗಳು ಲಭಿಸಿದುವು. ಸೋಮವಾರ 18 ಮಕ್ಕಳು ಸ್ಟೇಂಪ್ ಪಡೆದುಕೊಂಡರು. ಮಂಗಳವಾರ 12 ಮಂದಿ ಪಡೆದು ಕೊಂಡರು. ಎಷ್ಟು ಸ್ಟೇಂಪುಗಳು ಬಾಕಿ ಇವೆ ಎಂದು ಹೇಗೆ ಕಂಡುಹಿಡಿಯಬಹುದು?

ಸೋಮವಾರ ಕಳೆದಾಗ ಎಷ್ಟು ಸ್ಟೇಂಪುಗಳು ಬಾಕಿ ಉಳಿದಿದ್ದುವು? ______

ಮಂಗಳವಾರ ಕಳೆದಾಗಲೋ? ______

ಮತ್ತೊಂದು ರೀತಿಯನ್ನು ನೋಡುವ.

ಒಟ್ಟು ಪಡೆದುಕೊಂಡ ಸ್ಟೇಂಪುಗಳು ಎಷ್ಟು? ______

ಬಾಕಿ ಇರುವ ಸ್ಟೇಂಪುಗಳು ಎಷ್ಟು? ______

ಯಾವ ರೀತಿಯಲ್ಲಿ ಮಾಡುವುದು ಹೆಚ್ಚು ಸುಲಭ?

## ಒಟ್ಟು ಎಷ್ಟು ರೂಪಾಯಿ

- ಅಮಲ್‌ನ ಅಪ್ಪನಿಗೆ ಕಳೆದವಾರದಲ್ಲಿ ಸೋಮವಾರ, ಬುಧವಾರ, ಶುಕ್ರವಾರ, ಶನಿವಾರಗಳಲ್ಲಿ ಕೆಲಸವಿತ್ತು. ಒಟ್ಟು 2750 ರೂಪಾಯಿ ಕೂಲಿ ಲಭಿಸಿತು. ಸೋಮವಾರ 650 ರೂಪಾಯಿಯೂ, ಶನಿವಾರ 700 ರೂಪಾಯಿಯೂ ಕೂಲಿ ಲಭಿಸಿತ್ತು. ಬುಧವಾರ ಮತ್ತು ಶುಕ್ರವಾರಗಳಲ್ಲಿ ಒಂದೇ ರೀತಿ ಕೂಲಿ ಲಭಿಸಿದೆ.

? ಬುಧವಾರ ಮತ್ತು ಶುಕ್ರವಾರ ಲಭಿಸಿದ ಒಟ್ಟು ಕೂಲಿ ಎಷ್ಟು? ☐

? ಅದರಲ್ಲಿ ಒಂದು ದಿನದ ಕೂಲಿ ಎಷ್ಟು? ☐

## ಹಾಲಿನ ಲೆಕ್ಕ

- ಅಮಲ್‌ನ ಮನೆಯಿಂದ ಸೆಪ್ಟಂಬರ್ ತಿಂಗಳಿನಿಂದ ಹಾಲಿನ ಸೊಸೈಟಿಗೆ ಹಾಲು ಕೊಡಲು ಆರಂಭಿಸಿದರು. ಆ ತಿಂಗಳು 3340 ರೂಪಾಯಿ ಲಭಿಸಿತು. ಅಕ್ಟೋಬರ್ ತಿಂಗಳಿನಲ್ಲಿ 4265 ರೂಪಾಯಿಯೂ ನವಂಬರ್‌ನಲ್ಲಿ 3768 ರೂಪಾಯಿಯೂ ಲಭಿಸಿತು. ಮೂರು ತಿಂಗಳಿನಲ್ಲಿ ಒಟ್ಟು ಲಭಿಸಿದ ಹಣವೆಷ್ಟು?

? ಸೆಪ್ಟಂಬರ್‌ನಲ್ಲಿ 2004 ರೂಪಾಯಿಯನ್ನೂ ಅಕ್ಟೋಬರ್‌ನಲ್ಲಿ 2770 ರೂಪಾಯಿಯನ್ನೂ ನವಂಬರ್‌ನಲ್ಲಿ 2070 ರೂಪಾಯಿಯನ್ನೂ ದನದ ಆಹಾರಕ್ಕಾಗಿ ಖರ್ಚು ಮಾಡಲಾಯಿತು. ಹಾಗಾದರೆ ಪ್ರತೀ ತಿಂಗಳಲ್ಲಿ ಉಳಿಕೆಯಾದ ಹಣವೆಷ್ಟು?



? ಸೆಪ್ಟಂಬರ್ ತಿಂಗಳಿಗಿಂತ ಅಕ್ಟೋಬರ್ ತಿಂಗಳಲ್ಲಿ ಎಷ್ಟು ಹಣ ಹೆಚ್ಚು ಸಿಕ್ಕಿತು?

? ಅಕ್ಟೋಬರ್ ತಿಂಗಳಿಗಿಂತ ನವಂಬರ್ ತಿಂಗಳಲ್ಲಿ ಎಷ್ಟು ಹಣ ಕಡಿಮೆ ಸಿಕ್ಕಿತು?

? ಸೆಪ್ಟಂಬರ್ ಮತ್ತು ನವಂಬರ್ ತಿಂಗಳುಗಳಲ್ಲಿ ಲಭಿಸಿದ ಆದಾಯದ ವ್ಯತ್ಯಾಸವೆಷ್ಟು?

- ಸಹಪಾಠಿಗಳಲ್ಲಿ ಕೇಳಲು ಇದೇ ರೀತಿಯ ಪ್ರಶ್ನೆಗಳನ್ನು ತಯಾರಿಸಿರಿ.


ಅಪ್ಪ ಜನಿಸಿದ್ದು 1976 ರಲ್ಲಿ ಮಗ ಜನಿಸಿದ್ದು 2005 ರಲ್ಲಿ

? ಅಪ್ಪ ಮತ್ತು ಮಗನ ಪ್ರಾಯಗಳೊಳಗಿನ ವ್ಯತ್ಯಾಸ ಎಷ್ಟು?

? ಈಗ ಪ್ರತಿಯೊಬ್ಬರ ಪ್ರಾಯ ಎಷ್ಟು?

ನಿಮ್ಮ ಮನೆಯವರ ಪ್ರಾಯಗಳನ್ನು ಕೇಳಿ ತಿಳಿಯಿರಿ. ಅದರಿಂದ ಅವರು ಜನಿಸಿದ ಇಸವಿಯನ್ನು ಕಂಡುಹಿಡಿಯಬಹುದಲ್ಲವೇ?

## ಲಾಭ ಪ್ರಭಾ ಯೋಜನೆ



■ ಅಮಲ್‌ನ ಮನೆಯ ವಿದ್ಯುತ್ ಮೀಟರ್ ಫೆಬ್ರವರಿ ತಿಂಗಳ ಕೊನೆಯಲ್ಲಿ 1866 ಯೂನಿಟ್ ರೀಡಿಂಗ್ ತೋರಿಸಿತು. ಮಾರ್ಚ್ ತಿಂಗಳ ಕೊನೆಯಲ್ಲಿ 2165 ಯೂನಿಟ್‌ನ್ನು ತೋರಿಸಿತು.


? ಮಾರ್ಚ್ ತಿಂಗಳಲ್ಲಿ ಎಷ್ಟು ಯೂನಿಟ್ ವಿದ್ಯುತ್ತನ್ನು ಉಪಯೋಗಿಸಲಾಯಿತು?

ಲಾಭ ಪ್ರಭಾ ಯೋಜನೆಯಲ್ಲಿ ಸೇರಿ ವಿದ್ಯುತ್‌ನ ಉಪಯೋಗ ಕಡಿಮೆ ಮಾಡಲು ಅವರು ತೀರ್ಮಾನಿಸಿದರು. ಎಪ್ರಿಲ್ ತಿಂಗಳ ಕೊನೆಯಲ್ಲಿ ಮೀಟರ್ 2402 ಯೂನಿಟನ್ನು ತೋರಿಸಿತು.

? ಲಾಭ ಪ್ರಭಾ ಯೋಜನೆಗೆ ಸೇರಿದ ನಂತರ ವಿದ್ಯುತ್ತಿನ ಉಪಯೋಗವನ್ನು ಕಡಿಮೆ ಮಾಡಲು ಸಾಧ್ಯವಾಯಿತೇ?

? ಎಷ್ಟು ಯೂನಿಟ್ ವಿದ್ಯುತ್ತನ್ನು ಉಳಿತಾಯ ಮಾಡಲು ಸಾಧ್ಯವಾಯಿತು?

### ಯಾತ್ರೆ



- ಅಮಲ್‌ನ ಅಪ್ಪನೂ, ಅಮ್ಮನೂ ಪೇಟೆಗೆ ಹೋಗಲು ತೀರ್ಮಾನಿಸಿದರು. ಒಬ್ಬರಿಗೆ ಟಿಕೇಟಿನ ದರ 18 ರೂಪಾಯಿ. ಅಮಲ್‌ನ ಅಪ್ಪ ಕಂಡಕ್ಟರ್ ಕೈಯಲ್ಲಿ 100 ರೂಪಾಯಿ ಕೊಟ್ಟರು. ಕಂಡಕ್ಟರ್ 2 ರೂಪಾಯಿಯ ಎರಡು ನಾಣ್ಯಗಳನ್ನು ಹಿಂದಿರುಗಿಸಿ 40 ಎಂದು ಹೇಳಿದ. 3 ಇಪ್ಪತ್ತು ರೂಪಾಯಿಗಳ ನೋಟುಗಳನ್ನು ಕೊಟ್ಟು ಈಗ ನೂರಾಯಿತೆಂದು ಹೇಳಿದ.

? ನೀವು ಇದನ್ನು ಹೇಗೆ ವಿವರಿಸುತ್ತೀರಿ?

### ನನಗೂ ಸಾಧ್ಯವಿದೆ

- ಈ ತಿಂಗಳ ಕೊನೆಯ ದಿನ ನಿಮ್ಮ ಮತ್ತು ಸಹಪಾಠಿಗಳ ಮನೆಯ ಮೀಟರ್‌ನಲ್ಲಿ ಎಷ್ಟು ಯೂನಿಟ್ ತೋರಿಸುತ್ತದೆ ಎಂದು ಕಂಡುಹಿಡಿಯಿರಿ. ನಂತರದ ತಿಂಗಳ ಕೊನೆಯ ದಿನ ಪುನಃ ಮೀಟರ್‌ನಲ್ಲಿ ನೋಡಿ ಎಷ್ಟು ಯೂನಿಟ್ ವಿದ್ಯುತ್ತನ್ನು ಉಪಯೋಗಿಸಲಾಗಿದೆ ಎಂದು ಕಂಡುಹಿಡಿಯಿರಿ.
- ಕಡಿಮೆ ವಿದ್ಯುತ್ ಉಪಯೋಗಿಸಿದ ಮನೆ ಯಾವುದು?
- ವಿದ್ಯುತ್ತಿನ ಬಳಕೆಯನ್ನು ಕಡಿಮೆ ಮಾಡಲು ಏನೆಲ್ಲಾ ಮಾಡಬಹುದೆಂದು ಆಲೋಚಿಸಿ ನೋಡಿ. ಎಲ್ಲರೂ ಸೇರಿ ಅದನ್ನು ಕಾರ್ಯಗತಗೊಳಿಸಿರಿ.

| |
|---|
| 7634 − 5326 |
| |

ಕೆಳಗೆ ಕೊಟ್ಟಿರುವವುಗಳಲ್ಲಿ ಒಂದು ಉತ್ತರ ಸರಿಯಾಗಿದೆ. ಅದು ಯಾವುದೆಂದು ಬಾಯಿಲೆಕ್ಕವಾಗಿ ಕಂಡುಹಿಡಿಯಬಹುದೇ?

**3506, 2405, 2308, 708**

## ಕುಟುಂಬ ಬಜೆಟ್

■ ಅಮಲನ ಮನೆಯ ಅಕ್ಟೋಬರ್ ತಿಂಗಳ ಕುಟುಂಬ ಬಜೆಟನ್ನು ಪರಿಶೀಲಿಸಿರಿ. ಬಿಟ್ಟು ಹೋದವುಗಳನ್ನು ಭರ್ತಿಮಾಡಿರಿ.

| ಆದಾಯ | ರೂಪಾಯಿ | ಖರ್ಚು | ರೂಪಾಯಿ |
|---|---|---|---|
| ಕೃಷಿಯಿಂದ | 4735 | ಆಹಾರ | |
| ಹಾಲು ಮಾರಿದ ಬಾಬ್ತು | 4265 | ಪ್ರಯಾಣ | 500 |
| | | ವಿದ್ಯುತ್ ಚಾರ್ಜು | 400 |
| | | ಫೋನ್ ಬಿಲ್ | 330 |
| | | ಬಟ್ಟೆ ಬರೆ | 460 |
| | | ಮನರಂಜನೆ, ಪತ್ರಿಕೆ, ಮಾಸಪತ್ರಿಕೆಗಳು | 480 |
| | | ವಿದ್ಯಾಭ್ಯಾಸ | 325 |
| | | ಆರೋಗ್ಯ | 400 |
| ಒಟ್ಟು | | ಒಟ್ಟು | 7445 |

? ಆದಾಯ ಮತ್ತು ಖರ್ಚುಗಳೊಳಗಿನ ವ್ಯತ್ಯಾಸವೆಷ್ಟು?

ಇದೇ ರೀತಿ ನಿಮ್ಮ ಕುಟುಂಬ ಬಜೆಟನ್ನು ತಯಾರಿಸಿರಿ.

## ಮಾಡಿನೋಡುವ

? ಒಂದು ಮೊಬೈಲ್ ಫೋನಿನ ಬೆಲೆ 3450 ರೂಪಾಯಿಯಾಗಿದೆ. ಹಳೆಯ ಫೋನನ್ನು ಮಾರಿದಾಗ 700 ರೂಪಾಯಿ ಲಭಿಸಿತು. ಹಾಗಾದರೆ ಹೊಸ ಮೊಬೈಲ್ ಫೋನ್‌ಗೆ ಇನ್ನು ಎಷ್ಟು ಹಣ ಕೊಡಬೇಕು?

■ ಆನೆಮಲೆ ಶಾಲೆಯಲ್ಲಿ ಎಲ್.ಪಿ., ಯು.ಪಿ., ಹೈಸ್ಕೂಲ್ ವಿಭಾಗಗಳಲ್ಲಾಗಿ 2060 ಮಕ್ಕಳಿದ್ದಾರೆ. ಎಲ್.ಪಿ. ವಿಭಾಗದಲ್ಲಿ 358 ಮಕ್ಕಳೂ ಯು.ಪಿ. ವಿಭಾಗದಲ್ಲಿ 449 ಮಕ್ಕಳೂ ಇದ್ದಾರೆ.

- ಹೈಸ್ಕೂಲ್ ವಿಭಾಗದಲ್ಲಿ ಎಷ್ಟು ಮಕ್ಕಳಿದ್ದಾರೆ?
- ಯು.ಪಿ. ವಿಭಾಗಕ್ಕಿಂತ ಎಷ್ಟು ಹೆಚ್ಚು ಮಕ್ಕಳು ಹೈಸ್ಕೂಲ್ ವಿಭಾಗದಲ್ಲಿದ್ದಾರೆ?

ಕೆಳಗೆ ಕೊಟ್ಟಿರುವವುಗಳಲ್ಲಿ ಯಾವುದರ ಉತ್ತರವು 2550 ಆಗಿದೆ?

- 7200 – 4750
- 6300 – 3750
- 5800 – 3650

| | |
|---|---|
| 2407 – | 2407 – |
| 1539 | 1539 |
| 868 | 978 |

ಯಾವ ಉತ್ತರ ಸರಿಯೆಂದು ಕಳೆದು ನೋಡದೆ ಹೇಗೆ ಕಂಡುಹಿಡಿಯಬಹುದು?

? ಒಂದು ಟಿ.ವಿ.ಯ ಬೆಲೆ 6780 ರೂಪಾಯಿಯೂ ಡಿ.ವಿ.ಡಿ. ಪ್ಲೇಯರ್‌ನ ಬೆಲೆ 2490 ರೂಪಾಯಿಯೂ ಆಗಿದೆ. ಇವೆರಡನ್ನು ಒಟ್ಟಿಗೆ ಪಡೆದುಕೊಳ್ಳುವಾಗ ಬೆಲೆಯಲ್ಲಿ 1390 ರೂಪಾಯಿಗಳ ಕಡಿತ ಲಭಿಸುವುದಾದರೆ ಇವುಗಳನ್ನು ಪಡೆಯಲು ಎಷ್ಟು ಹಣ ಕೊಡಬೇಕು?

? ಆನೆಮಲೆ ವಾರ್ಡಿನ ಜನಸಂಖ್ಯೆ 1780 ಆಗಿದೆ. ಅಲ್ಲಿ ಪುರುಷರಿಗಿಂತ 80 ಮಂದಿ ಮಹಿಳೆಯರು ಹೆಚ್ಚು ಇದ್ದಾರೆ. ಮಹಿಳೆಯರ ಮತ್ತು ಪುರುಷರ ಸಂಖ್ಯೆ ಎಷ್ಟು?

| 6006 – 3987 |
|---|

3987 ರೊಂದಿಗೆ 13ನ್ನು ಕೂಡಿಸಿದರೆ 4000.
4000 ದೊಂದಿಗೆ 2000ವನ್ನು ಕೂಡಿಸಿದರೆ 6000.
6000 ದೊಂದಿಗೆ 6 ನ್ನು ಕೂಡಿಸಿದರೆ 6006
2000 + 13 + 6 = 2019

| 6530 – 2520 |
|---|

6500 ರಿಂದ 2500 ಕಳೆದರೆ 4000. 30 ರಿಂದ 20 ನ್ನು ಕಳೆದರೆ 10
4000 + 10 = 4010
ಈ ಕ್ರಿಯೆಯ ಉತ್ತರ ಕಂಡುಹಿಡಿಯಲು ಇರುವ ಇತರ ವಿಧಾನಗಳು ಯಾವುವು?

**ಬಾಯಿಲೆಕ್ಕವಾಗಿ ಕಂಡುಹಿಡಿಯಿರಿ**


**5982 – 3694 = 2288 ಆದರೆ**
**5980 – 3694 =**
**5982 – 3692 =**
**5980 – 3692 =**
**ಹೇಗೆ ಕಂಡುಹಿಡಿದಿರಿ?**

**ಗುಣಿಸುವಾ ಕಳೆಯುವಾ**

$2 \times 2 - 1 \times 1 = 3$
$3 \times 3 - 2 \times 2 = 5$
$4 \times 4 - 3 \times 3 = 7$
$9 \times 9 - 8 \times 8 = .....$

## ಸಂಖ್ಯಾಚಕ್ರವನ್ನು ಪೂರ್ತಿಗೊಳಿಸಿರಿ

■ ಹೊರಭಾಗದ ಉರುಟಿನಲ್ಲಿರುವ ಕೋಣೆಗಳ ಸಂಖ್ಯೆಗಳಿಂದ ಒಳಭಾಗದ ಉರುಟಿನಲ್ಲಿರುವ ಕೋಣೆಗಳ ಸಂಖ್ಯೆಗಳನ್ನು ಕಳೆದಾಗ 4023 ಸಿಗುವ ರೀತಿಯಲ್ಲಿ ಸಂಖ್ಯಾ ಚಕ್ರವನ್ನು ಪೂರ್ತಿಗೊಳಿಸಿರಿ.




## ಬಜೆಟ್

■ ಕೃಷಿಕನಾದ ರಾಮು ಕಳೆದ ನಾಲ್ಕು ವರ್ಷದ ತನ್ನ ಉತ್ಪಾದನಾ ಖರ್ಚನ್ನು ಪರಿಶೀಲಿಸಿ ಹೇಳಿದ್ದನ್ನು ನೋಡಿರಿ. ಕಳೆದ ವರ್ಷದ ಖರ್ಚು ಈ ವರ್ಷದ ಖರ್ಚಿಗಿಂತ 1439 ರೂಪಾಯಿ ಕಡಿಮೆಯಾಗಿತ್ತು. ಆದರೆ ಕಳೆದ ವರ್ಷಕ್ಕಿಂತ 2496 ರೂಪಾಯಿ ಕಡಿಮೆಯಾಗಿತ್ತು ಅದಕ್ಕಿಂತ ಮೊದಲ ವರ್ಷದ್ದು. ಅದರ ಮೊದಲಿನ ವರ್ಷ ಈ ವರ್ಷಕ್ಕಿಂತ 4429 ರೂಪಾಯಿಗಳಷ್ಟು ಕಡಿಮೆಯಾಗಿತ್ತು. ಈ ವರ್ಷದ ಖರ್ಚು 9827 ರೂಪಾಯಿ.

? 4 ವರ್ಷಗಳ ಉತ್ಪಾದನಾ ಖರ್ಚನ್ನು ಕಂಡುಹಿಡಿಯಿರಿ.

? ಅತೀ ಕಡಿಮೆ ಖರ್ಚಾದ ಹಣ ಎಷ್ಟು?

## ದುಂಬಿಗೆ ಸಹಾಯ ಮಾಡಬಹುದೇ?



ಒಂದು ಹೂವಿನ ಜೇನನ್ನು ಹೀರಲು ಮಾತ್ರ ದುಂಬಿಗೆ ಸಾಧ್ಯವಾಗಲಿಲ್ಲ. ಅದು ಮಧ್ಯದ ಕೋಣೆಗಳಲ್ಲಿರುವ ಸಂಖ್ಯೆಗಳ ವ್ಯತ್ಯಾಸವಾಗಿ ಬಾರದ ಹೂವಾಗಿದೆ. ಅದು ಯಾವುದೆಂದು ಕಂಡುಹಿಡಿಯಬಹುದೇ?

| | | | | |
|---|---|---|---|---|
| 191 | 3944 | 5222 | 767 | 4135 |
| 1087 | | | | 3998 |
| 713 | | | | 1278 |
| 3231 | | | | 1998 |
| 904 | 4711 | 1991 | 5989 | 4902 |

| | | |
|---|---|---|
| 4096 | 6087 | 865 |
| 98 | 4809 | 5000 |

$3 \times 3 - 1 \times 1 = 4 \times 2$

$4 \times 4 - 2 \times 2 = 6 \times 2$

$5 \times 5 - 3 \times 3 = 8 \times 2$

................................

................................

$12 \times 12 - 10 \times 10 =$ .........

$4 \times 4 - 1 \times 1 = 5 \times 3$

$5 \times 5 - 2 \times 2 = 7 \times 3$

$6 \times 6 - 3 \times 3 = 9 \times 3$

................................

................................

$13 \times 13 - 10 \times 10 =$ .........

- ಸಂಬಂಧ ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.
- ಇದೇ ರೀತಿಯ ಇತರ ನಮೂನೆಗಳನ್ನು ತಯಾರಿಸಿರಿ.

## ಆಯವ್ಯಯ



■ ಶಿಜಿ ಟೀಚರ ಕಳೆದ ತಿಂಗಳಿನ ಬಜೆಟನ್ನು ನೋಡಿರಿ.

| ಖರ್ಚಿನ ವಿಧಗಳು | ತೆಗೆದಿರಿಸಿದ್ದು (ರೂಪಾಯಿಗಳಲ್ಲಿ) | ಖರ್ಚಾದುದು (ರೂಪಾಯಿಗಳಲ್ಲಿ) |
|---|---|---|
| ಆಹಾರ | 5400 | 4896 |
| ಬಟ್ಟೆ, ಪ್ರಯಾಣ, ಮದ್ದು ಮತ್ತು ಆಚರಣೆ | 2625 | 2980 |
| ಫೋನ್, ವಿದ್ಯುತ್, ಟಿ.ವಿ, ಪತ್ರಿಕೆ, ಇಂಟರ್‌ನೆಟ್, ಪ್ರಕಟಣೆಗಳು | 2075 | 1948 |
| ಇತರ | 2500 | 3075 |

? ತೆಗೆದಿರಿಸಿದುದಕ್ಕಿಂತ ಖರ್ಚು ಹೆಚ್ಚೋ ಕಡಿಮೆಯೋ?

? ಯಾವ ವಿಧದ ಖರ್ಚು ತೆಗೆದಿರಿಸಿದ ಹಣಕ್ಕಿಂತ ಹೆಚ್ಚಾಯಿತು? ಎಷ್ಟು ಹೆಚ್ಚು?

? ಯಾವ ವಿಧದ ಖರ್ಚು ತೆಗೆದಿರಿಸಿದ ಹಣಕ್ಕಿಂತ ಕಡಿಮೆಯಾಯಿತು? ಎಷ್ಟು ಕಡಿಮೆ?

# ಆಕೃತಿಗಳನ್ನು ರಚಿಸೋಣ

5



ಇದು ಯಾವ ಕಲಾರೂಪ?

ಈ ಚಿತ್ರದಿಂದ ನಿಮಗೆ ಪರಿಚಿತವಾದ ಯಾವೆಲ್ಲಾ ಜ್ಯಾಮಿತಿ ಆಕೃತಿಗಳನ್ನು ಕಂಡುಕೊಳ್ಳಲು ಸಾಧ್ಯ?

ಎಲ್ಲಾ ತ್ರಿಕೋನಗಳಿಗೂ ಕೆಂಪು ಬಣ್ಣವನ್ನು ಕೊಡಿರಿ.

ಉರುಟುಗಳಿಗೂ ಆಯತಗಳಿಗೂ ಇಷ್ಟವಿರುವ ಬಣ್ಣಗಳನ್ನು ಹಚ್ಚಿ ಚಿತ್ರವನ್ನು ಅಂದಗೊಳಿಸಿರಿ.


JT 413-5/Maths-4 (K) (Vol-1)

? ವಿವಿಧ ಆಕೃತಿಗಳಿಗೆ ಬಣ್ಣಕೊಟ್ಟು ಆಯಿತಲ್ಲವೇ. ಈ ಆಕೃತಿಗಳನ್ನು ಹೇಗೆ ರಚಿಸಬಹುದು?

? ಉರುಟನ್ನು ರಚಿಸಲು ಯಾವ ಯಾವ ವಸ್ತುಗಳನ್ನು ಬಳಸಬಹುದು?

ನಾಣ್ಯ, ..........................................................................................

ಒಂದು ಆಯತದಲ್ಲಿ ತುಂಬಾ ಉರುಟುಗಳನ್ನು ರಚಿಸಿರುವುದನ್ನು ನೋಡಿರಿ.



ಉರುಟಿನ ಒಳಗೆ ಸಮಾನ ಅಳತೆಯಿರುವ ಉರುಟುಗಳನ್ನು ರಚಿಸಿರಿ.

ಎಷ್ಟು ಉರುಟುಗಳನ್ನು ರಚಿಸಲು ಸಾಧ್ಯವಾಯಿತು? [ ]

ಗೆಳೆಯನು ಎಷ್ಟು ಚಿತ್ರಗಳನ್ನು ರಚಿಸಿದನು? [ ]

ತರಗತಿಯಲ್ಲಿ ಅತಿ ಹೆಚ್ಚು ರಚಿಸಿರುವುದು ಯಾರು? [ ]

## ಉರುಟಿನೊಳಗೆ


- ಈ ಉರುಟಿನ ಮಧ್ಯಭಾಗದಲ್ಲಿ ನಾಣ್ಯವನ್ನು ಉಪಯೋಗಿಸಿ ಒಂದು ಉರುಟನ್ನು ರಚಿಸಿರಿ.





- ಈ ಆಯತದ ಮಧ್ಯಭಾಗದಲ್ಲಿ ಒಂದು ಉರುಟನ್ನು ರಚಿಸಿರಿ.

## ಆಯತ ಆಯತ


- ಪ್ರತಿಯೊಂದು ಚಿತ್ರದಲ್ಲೂ ಒಂದು ಗೆರೆ ಎಳೆದು ಎರಡು ಆಯತಗಳನ್ನು ರಚಿಸಿರಿ.



■ ಒಂದು ಗೆರೆಯನ್ನು ಎಳೆದು ಆಯತ ಮತ್ತು ತ್ರಿಕೋನಗಳನ್ನಾಗಿ ಬದಲಾಯಿಸಿರಿ.




■ ಎರಡು ಗೆರೆಗಳಂತೆ ಎಳೆದು ಆಯತಗಳನ್ನು ರಚಿಸಿರಿ. ಆಯತಗಳ ಸಂಖ್ಯೆಯನ್ನು ಬರೆಯಿರಿ.



■ ಎಲ್ಲರಿಗೂ ಲಭಿಸುವ ಆಯತಗಳ ಸಂಖ್ಯೆ ಸಮಾನವಾಗಿದೆಯೇ?

## ಯಾವುದು ಆಯತ?


? ಕೆಳಗೆ ಕೊಟ್ಟಿರುವವುಗಳಲ್ಲಿ ಯಾವುದು ಆಯತವಾಗಿದೆ?



? ಯಾಕೆ?

### ನಾನು ಕಂಡುಕೊಂಡದ್ದು

- ಒಂದು ಗೆರೆಯು ಅದರ ಹತ್ತಿರದ ಗೆರೆಗೆ ಲಂಬವಾಗಿರಬೇಕು.
-
-
-




## ಕಂಡುಹಿಡಿಯುವ ಬಣ್ಣ ಹಚ್ಚುವ

? ಅನು ರಚಿಸಿದ ಚಿತ್ರಗಳಲ್ಲಿ ಆಯತಗಳು ಯಾವುವು?




### ನಾನು ಕಂಡುಕೊಂಡದ್ದು

| ಚಿತ್ರ → | 1 | 2 | 3 | 4 | 5 |
|---|---|---|---|---|---|
| ನಾಲ್ಕು ಬದಿಗಳಿವೆ | | | | | |
| ನಾಲ್ಕು ಮೂಲೆಗಳಿವೆ | | | | | |
| ನಾಲ್ಕು ಬದಿಗಳಲ್ಲಿಯೂ ಒಂದು ಗೆರೆಗೆ ಲಂಬವಾಗಿ ಅದರ ಸಮೀಪದ ಗೆರೆ ಇದೆ. | | | | | |
| ವಿರುದ್ಧ ಬದಿಗಳು ಸಮಾನ | | | | | |

- ನೀವು ಕಂಡುಹಿಡಿದ ಆಯತಗಳಿಗೆ ಬಣ್ಣ ಕೊಡಿರಿ.


## ಬದಿಗಳೂ ಮೂಲೆಗಳೂ


■ ಅಂಜು ಮತ್ತು ಗೆಳೆಯರು ಅಧ್ಯಾಪಕ ದಿನಾಚರಣೆಗಾಗಿ ಶುಭಾಶಯ ಪತ್ರಗಳನ್ನು ತಯಾರಿಸುತ್ತಾರೆ.



? ಆಯತಾಕೃತಿಯಲ್ಲಿರುವ ಶುಭಾಶಯ ಪತ್ರವನ್ನು ತಯಾರಿಸಲು ದಪ್ಪದ ಕಾಗದವನ್ನು ನೀವು ಹೇಗೆ ಕತ್ತರಿಸುವಿರಿ?

- 
- 



ಈ ಚಿತ್ರಕ್ಕೆ ಹೊಂದಿಸಿಟ್ಟು ಮೂಲೆಗಳನ್ನು ಸರಿಪಡಿಸಬಹುದಲ್ಲವೇ.

- ನಾನು ತಯಾರಿಸಿದ ಶುಭಾಶಯ ಪತ್ರದ ನಾಲ್ಕು ಬದಿಗಳ ಉದ್ದಗಳು

☐ ಸೆ.ಮೀ. ☐ ಸೆ.ಮೀ. ☐ ಸೆ.ಮೀ. ☐ ಸೆ.ಮೀ.

- ಸಹಪಾಠಿಗಳು ತಯಾರಿಸಿದ ಶುಭಾಶಯ ಪತ್ರಗಳ ಬದಿಗಳು

| ಹೆಸರು | ಶುಭಾಶಯ ಪತ್ರದ ಬದಿಗಳು |
|---|---|
| | ...... ಸೆ.ಮೀ., ...... ಸೆ.ಮೀ., ...... ಸೆ.ಮೀ., ...... ಸೆ.ಮೀ. |
| | |
| | |
| | |
| | |

- ಯಾರ ಯಾರ ಶುಭಾಶಯ ಪತ್ರಗಳಿಗೆ ಆಯತದ ಎಲ್ಲಾ ವಿಶೇಷತೆಗಳು ಇವೆ?


## ರಚಿಸಿ ನೋಡಿರಿ ಕಂಡುಹಿಡಿಯಿರಿ

■ 10 ಸೆ.ಮೀ., 8 ಸೆ.ಮೀ., 6 ಸೆ.ಮೀ., 5 ಸೆ.ಮೀ. ಅಳತೆಯ ಮಡಲ ಕಡ್ಡಿಗಳನ್ನು ತುಂಡರಿಸಿ ತೆಗೆಯಿರಿ. ಇವುಗಳನ್ನು ಉಪಯೋಗಿಸಿ ಕೆಳಗೆ ಕೊಟ್ಟಿರುವ ಅಳತೆಗಳಲ್ಲಿ ಆಯತಗಳನ್ನು ರಚಿಸಿ ನೋಡಿರಿ.


| | | | | |
|---|---|---|---|---|
| 1 | 10 ಸೆ.ಮೀ., | 8 ಸೆ.ಮೀ., | 10 ಸೆ.ಮೀ., | 8 ಸೆ.ಮೀ. |
| 2 | 10 ಸೆ.ಮೀ., | 6 ಸೆ.ಮೀ., | 6 ಸೆ.ಮೀ., | 5 ಸೆ.ಮೀ. |
| 3 | 8 ಸೆ.ಮೀ., | 6 ಸೆ.ಮೀ., | 6 ಸೆ.ಮೀ., | 8 ಸೆ.ಮೀ., |
| 4 | 5 ಸೆ.ಮೀ., | 5 ಸೆ.ಮೀ., | 10 ಸೆ.ಮೀ., | 8 ಸೆ.ಮೀ., |
| 5 | 6 ಸೆ.ಮೀ., | 10 ಸೆ.ಮೀ., | 10 ಸೆ.ಮೀ., | 6 ಸೆ.ಮೀ., |
| 6 | 8 ಸೆ.ಮೀ., | 8 ಸೆ.ಮೀ., | 8 ಸೆ.ಮೀ., | 8 ಸೆ.ಮೀ., |

? ಯಾವ ಯಾವ ಅಳತೆಗಳಿಂದ ಆಯತಗಳನ್ನು ರಚಿಸಲು ಸಾಧ್ಯವಿಲ್ಲ? ಯಾಕೆ?

- 
- 
- 
- 




■ ಅನು ರಚಿಸಿದ ಆಯತವನ್ನು ನೋಡಿರಿ.




? ಈ ಆಯತದ ವಿಶೇಷತೆಯೇನು?






### ಗಣಿತಾಕೃತಿಗಳು

ಕಂಪ್ಯೂಟರ್ ಉಪಯೋಗಿಸಿ ವಿವಿಧ ಗಣಿತಾಕೃತಿಗಳನ್ನು ರಚಿಸಬಹುದು. ಇದಕ್ಕಾಗಿ ಜಿಯೋಜಿಬ್ರ (GeoGebra) ಸೋಫ್ಟ್‌ವೇರ್ ಉಪಯೋಗಿಸಬಹುದು. ಐ.ಟಿ. @ ಸ್ಕೂಲಿನ ಉಬುಂಟುವಿನ ಸೋಫ್ಟ್‌ವೇರ್ ತೆರೆಯಲಿರುವ ವಿಧಾನ

Application → Education → GeoGebra

- ನಮ್ಮ ಸುತ್ತುಮುತ್ತಲು ಕಾಣುವ ಆಯತ, ತ್ರಿಕೋನ, ಮತ್ತು ವೃತ್ತ ಎಂಬಿವುಗಳನ್ನು ಕಂಡುಹಿಡಿದು ಬರೆಯಿರಿ.

| ವಸ್ತುಗಳು | ಆಕೃತಿ |
|---|---|
| • ನಾಣ್ಯ | ವೃತ್ತ |
| • ಸೂಚನಾ ಫಲಕ | ............................ |
| • | |
| • | |
| • | |
| • | |
| • | |

## ಕುಟ್ಟಪ್ಪನ ಭತ್ತದ ಬಯಲು





? ಕುಟ್ಟಪ್ಪನ ಭತ್ತದ ಬಯಲು ಆಯತಾಕೃತಿಯಲ್ಲಿದೆ. ಅವನು ಯಾವಾಗಲೂ ಬೆಳಿಗ್ಗೆ ಕೃಷಿಯನ್ನು ನೋಡಲು ಬಯಲಿನ ಸುತ್ತಲು ನಡೆಯುತ್ತಿದ್ದನು. ನಡೆಯಲು ಆರಂಭಿಸಿ ಪುನಃ ಅದೇ ಸ್ಥಳಕ್ಕೆ ತಲುಪುವಾಗ ಅವನು ಎಷ್ಟು ಮೀಟರ್ ದೂರ ನಡೆದಿರಬಹುದು?

ನಾನು ಕಂಡುಕೊಂಡದ್ದು







## ಕಡ್ಡಿಯೂ ಆಯತವೂ



6 ಸೆ.ಮೀ.



5 ಸೆ.ಮೀ.




10 ಸೆ.ಮೀ.

ಕಡ್ಡಿಗಳ ಕಟ್ಟಗಳನ್ನು ನೋಡಿದಿರಲ್ಲವೇ. ಈ ಕಡ್ಡಿಗಳನ್ನು ಉಪಯೋಗಿಸಿ ಆಯತಗಳನ್ನು ರಚಿಸಬೇಕು.




■ ಕಡ್ಡಿಗಳನ್ನು ಉಪಯೋಗಿಸಿ ಬಶೀರ್ ತಯಾರಿಸಿದ ಆಯತವನ್ನು ನೋಡಿರಿ.



6 ಸೆ.ಮೀ.

10 ಸೆ.ಮೀ.




? ಬಶೀರ್ ನಿರ್ಮಿಸಿದ ಆಯತದ ನಾಲ್ಕು ಕಡ್ಡಿಗಳ ಒಟ್ಟು ಉದ್ದ [ ]

**ಅಡ್ಡಕ್ಕೂ ನೀಟಕ್ಕೂ ಇರುವ ಬದಿಗಳ ಅಳತೆಗಳನ್ನು ಕೂಡಿಸಿ ಎರಡರಿಂದ ಗುಣಿಸಿದರೆ ಆಯತದ ಸುತ್ತಳತೆಯು ಸಿಗುವುದು.**

## ಚೌಕದ ಸುತ್ತಳತೆ


ಆಶಾ 10 ಸೆ.ಮೀ ಉದ್ದವಿರುವ ಕಡ್ಡಿಗಳನ್ನು ಉಪಯೋಗಿಸಿ ಚೌಕವನ್ನು ನಿರ್ಮಿಸಿದಳು.

ಇದರ ಸುತ್ತಳತೆ = [ ] ಸೆ.ಮೀ.


ಒಂದು ಚೌಕದ ಬದಿಯ ಉದ್ದವನ್ನು ನಾಲ್ಕರಿಂದ ಗುಣಿಸಿದಾಗ ಅದರ ಸುತ್ತಳತೆಯು ಸಿಗುವುದು.

## ಸುತ್ತಳತೆಯನ್ನು ಕಂಡುಹಿಡಿಯೋಣ


■ ಕೆಳಗೆ ಕೊಟ್ಟಿರುವ ಆಕೃತಿಗಳ ಸುತ್ತಳತೆಯನ್ನು ಕಂಡುಹಿಡಿಯಿರಿ.





ಸುತ್ತಳತೆ




ಸುತ್ತಳತೆ




ಸುತ್ತಳತೆ





ಸುತ್ತಳತೆ

ಯಾವುದೇ ಆಕೃತಿಯ ಸುತ್ತಳತೆ ಎಂದರೆ ಅದರ ಎಲ್ಲಾ ಬದಿಗಳ ಒಟ್ಟು ಉದ್ದವಾಗಿದೆ.

**ಹೀಗೂ ಆಕೃತಿಗಳು**

ಈ ಆಕೃತಿಯ ಸುತ್ತಳತೆಯನ್ನು ಕಂಡುಹಿಡಿಯಿರಿ.
(ಅಳತೆಗಳು ಸೆಂಟಿ ಮೀಟರಿನಲ್ಲಿದೆ)




## ತೋಟಕ್ಕೊಂದು ತಂತಿ ಬೇಲಿ

■ ಶಾಲೆಯ ತರಕಾರಿ ತೋಟಕ್ಕೆ ತಂತಿ ಬೇಲಿ ಹಾಕಬೇಕು.
ಆಯತಾಕೃತಿಯಲ್ಲಿರುವ ಬೆಂಡೆಕಾಯಿ ತೋಟಕ್ಕೂ, ಚೌಕಾಕೃತಿಯಲ್ಲಿರುವ ಹರಿವೆ ತೋಟಕ್ಕೂ ಬೇಲಿ ಕಟ್ಟಬೇಕಾಗಿದೆ.

5 ಮೀಟರ್



7 ಮೀಟರ್



4 ಮೀಟರ್

? ಒಂದು ಮೀಟರ್ ಉದ್ದದಲ್ಲಿ ತಂತಿ ಹಾಕಲು 20 ರೂಪಾಯಿ ಖರ್ಚಾಗುವುದಾದರೆ ಒಂದು ಸಾಲು ತಂತಿ ಹಾಕಲು ಎಷ್ಟು ರೂಪಾಯಿ ಖರ್ಚಾಗಬಹುದು?




ಬೆಂಡೆಕಾಯಿ ತೋಟದ ಸುತ್ತಳತೆ = [ ] ಮೀಟರ್

ಹರಿವೆ ತೋಟದ ಸುತ್ತಳತೆ = [ ] ಮೀಟರ್

ಎರಡೂ ತೋಟಗಳ ಒಟ್ಟು ಸುತ್ತಳತೆ =.......... + ..........

ಒಂದು ಸಾಲು ತಂತಿ ಹಾಕಲು ತಗಲುವ ಖರ್ಚು = 20 × ಸುತ್ತಳತೆ = [ ]

? 5 ಸಾಲಿನ ಬೇಲಿಯನ್ನು ಹಾಕುವುದಾದರೆ? [ ]

## ಲೆಕ್ಕ ಮಾಡಿ ನೋಡೋಣ



? ಒಂದು ಆಯತದ ಉದ್ದ 6 ಸೆ.ಮೀ., ಅಗಲ 4 ಸೆ.ಮೀ. ಸುತ್ತಳತೆ ಎಷ್ಟು?

? ಒಂದು ಆಯತದ ಉದ್ದ 8 ಸೆ.ಮೀ. ಆಗಿದೆ. ಅದರ ಸುತ್ತಳತೆ 24 ಸೆ.ಮೀ. ಆದರೆ ಅಗಲವೆಷ್ಟು?


? ಒಂದು ಆಯತದ ಉದ್ದ ಮತ್ತು ಅಗಲಗಳ ಮೊತ್ತ 14 ಸೆ.ಮೀ. ಆದರೆ ಅದರ ಸುತ್ತಳತೆ ಎಷ್ಟು?

? 22 ಸೆ.ಮೀ. ಸುತ್ತಳತೆಯಿರುವ ಒಂದು ಆಯತದ ಉದ್ದ ಮತ್ತು ಅಗಲಗಳು ಯಾವ ಯಾವ ಅಳತೆಗಳಲ್ಲಿರಬಹುದು?

? ಆಯತವನ್ನು ಪೂರ್ತಿಗೊಳಿಸಿ ಸುತ್ತಳತೆಯನ್ನು ಬರೆಯಿರಿ.



? ತ್ರಿಕೋನವನ್ನು ಪೂರ್ತಿಗೊಳಿಸಿ, ಸುತ್ತಳತೆಯನ್ನು ಕಂಡುಹಿಡಿದು ಬರೆಯಿರಿ.




? ಒಂದು ತ್ರಿಕೋನದ ಸುತ್ತಳತೆ 30 ಸೆ.ಮೀ., ಇದರ ಎರಡು ಬದಿಗಳ ಉದ್ದ 10 ಸೆ.ಮೀ. ಮತ್ತು 9 ಸೆ.ಮೀ. ಆದರೆ ಮೂರನೆಯ ಬದಿಯ ಉದ್ದವೆಷ್ಟು?

? ಒಂದು ಚೌಕದ ಸುತ್ತಳತೆಯು 20 ಸೆ.ಮೀ., ಹಾಗಾದರೆ ಒಂದು ಬದಿಯ ಉದ್ದವೆಷ್ಟು?

## ಆಯತ ಮತ್ತು ತ್ರಿಕೋನ




ಚಿತ್ರ (1)




ಚಿತ್ರ (2)

- ಚಿತ್ರ (1) ರ ಆಯತದ ವಿರುದ್ಧ ಮೂಲೆಗಳ ಮೂಲಕ ಕತ್ತರಿಸಿ ಚಿತ್ರ (2) ರಲ್ಲಿರುವಂತೆ ಎರಡು ತ್ರಿಕೋನಗಳನ್ನಾಗಿ ಮಾಡಲಾಗಿದೆ.

  ಚಿತ್ರ (1) ರ ಆಯತದ ಸುತ್ತಳತೆ = ☐

  ಚಿತ್ರ (2) ರ ತ್ರಿಕೋನಗಳ ಒಟ್ಟು ಸುತ್ತಳತೆ = ☐ + ☐ = ☐

## ಬೆಂಕಿಪೆಟ್ಟಿಗೆ ಆಯತ

- ಮಕ್ಕಳು ಗುಂಪಿನಲ್ಲಿ ಬೆಂಕಿಕಡ್ಡಿಗಳನ್ನು ಉಪಯೋಗಿಸಿ ಆಯತಗಳನ್ನು ನಿರ್ಮಿಸುತ್ತಿದ್ದಾರೆ.

  ಪ್ರತಿಯೊಬ್ಬರಿಗೂ 20 ರಂತೆ ಬೆಂಕಿಕಡ್ಡಿಗಳನ್ನು ಕೊಟ್ಟಿರುವರು. ಅವರು ನಿರ್ಮಿಸಿದ ಆಯತದ ಉದ್ದ ಮತ್ತು ಅಗಲಗಳು ಯಾವ ಯಾವ ಅಳತೆಗಳಲ್ಲಾಗಿರಬಹುದು?

| ಗುಂಪು | ಉದ್ದಕ್ಕೆ ಉಪಯೋಗಿಸಿದ ಬೆಂಕಿಕಡ್ಡಿಗಳ ಸಂಖ್ಯೆ | ಅಗಲದಲ್ಲಿ ಉಪಯೋಗಿಸಿದ ಬೆಂಕಿಕಡ್ಡಿಗಳ ಸಂಖ್ಯೆ | ಒಟ್ಟು ಬೆಂಕಿಕಡ್ಡಿಗಳು |
|---|---|---|---|
| 1 | 8 + 8 = 16 | 2 + 2 = 4 | 20 |
| 2 | ... + ... = 10 | | |
| 3 | | | |
| 4 | | | |
| 5 | | | |

**ನಾನು ಕಂಡುಕೊಂಡದ್ದು**







## ಸರಿಗೆ ಆಯತ

? ಆನಿಯ ಕೈಯಲ್ಲಿ 24 ಸೆಂಟಿಮೀಟರ್ ಉದ್ದವಿರುವ ಸರಿಗೆಯಿದೆ. ಅದನ್ನು ಉಪಯೋಗಿಸಿ ಅವಳಿಗೆ ಯಾವ ಯಾವ ಅಳತೆಗಳಲ್ಲಿರುವ ಆಯತವನ್ನು ನಿರ್ಮಿಸಬಹುದು?

? ನಿರ್ಮಿಸಿರುವುದು ಚೌಕವಾದರೆ ಅದರ ಒಂದು ಬದಿಯ ಉದ್ದವೆಷ್ಟು?

## ತಿರುಗಿ ತಿರುಗಿ

? ಮೂರು ಬದಿಗಳೂ 6 ಸೆಂಟೀ ಮೀಟರುಗಳಂತಿರುವ ದೊಡ್ಡ ತ್ರಿಕೋನವನ್ನು ಕಂಡಿರಲ್ಲವೇ? ಇದರ ಸುತ್ತಳತೆ ಎಷ್ಟು? ☐ ಸೆ.ಮೀ.



ಇದರ ಬದಿಗಳ ಮಧ್ಯದಲ್ಲಿರುವ ಮೂರು ಚುಕ್ಕಿಗಳನ್ನು ಜೋಡಿಸಿ ಮತ್ತೊಂದು ತ್ರಿಕೋನವನ್ನು ರಚಿಸಿದ್ದಾರೆ.

ಅದರ ಒಂದು ಬದಿಯ ಉದ್ದ ☐ ಸೆ.ಮೀ.

ಸುತ್ತಳತೆ ☐ ಸೆ.ಮೀ.


ಎರಡನೆಯದಾಗಿ ರಚಿಸಿದ ತ್ರಿಕೋನದ ಬದಿಗಳ ಮಧ್ಯದಲ್ಲಿ ಚುಕ್ಕಿಗಳನ್ನು ಹಾಕಿ ಅವುಗಳನ್ನು ಜೋಡಿಸಿ ಅದರ ಒಳಗಿನ ತ್ರಿಕೋನವನ್ನು ರಚಿಸಲಾಗಿದೆ. ಇದರ ಒಂದು ಬದಿಯ ಉದ್ದವೆಷ್ಟು?

☐

ಸುತ್ತಳತೆ? ☐


? ಒಂದು ಕಾಗದದಲ್ಲಿ 3 ಚುಕ್ಕಿಗಳನ್ನು ಹಾಕಿರಿ. ಆ ಚುಕ್ಕಿಗಳನ್ನು ಜೋಡಿಸಿ ಗೆರೆಗಳನ್ನು ರಚಿಸಿರಿ. ತ್ರಿಕೋನಗಳು ಸಿಗುತ್ತವೆಯೆ? ಚುಕ್ಕಿಗಳ ಸ್ಥಾನ ಎಲ್ಲಿದ್ದರೂ ತ್ರಿಕೋನವನ್ನು ರಚಿಸಲು ಸಾಧ್ಯವೆ?

? ಕೊಟ್ಟಿರುವ ಆಯತದೊಳಗಿನ ಚುಕ್ಕಿಗಳನ್ನು ಜೋಡಿಸಿ ನಮೂನೆಯನ್ನು ಪೂರ್ತಿಗೊಳಿಸಿರಿ.



ಇದೇ ರೀತಿ ಚುಕ್ಕಿಗಳನ್ನು ಹಾಕಿ ಅವುಗಳನ್ನು ಜೋಡಿಸಿ ಹೊಸ ನಮೂನೆಗಳನ್ನು ಕಂಡುಹಿಡಿಯಿರಿ.

## ಜೋಡಿಸಿ ಇಡೋಣ




ಮುಂದಿನ ಚಿತ್ರವನ್ನು ಬಿಡಿಸಿರಿ.


ಅದರಲ್ಲಿ ಎಷ್ಟು ತ್ರಿಕೋನಗಳಿವೆ? ☐

**ನಾನು ಕಂಡುಕೊಂಡದ್ದು**





■ ಎಡಭಾಗದಲ್ಲಿರುವ ಚಿತ್ರಕ್ಕೆ ಬಣ್ಣ ಹಚ್ಚಿದಂತೆ ಬಲಭಾಗದಲ್ಲಿರುವ ಚಿತ್ರಕ್ಕೂ ಬಣ್ಣ ಕೊಡಿರಿ.






ಕೆಳಗೆ ಕೊಟ್ಟಿರುವ ಚಿತ್ರಕ್ಕೆ ವಿಭಿನ್ನ ರೀತಿಯಲ್ಲಿ ಬಣ್ಣ ಕೊಡಿರಿ.





## ಕೆಲವು ಆಕೃತಿಗಳು



ಇಂತಹ ಆಕೃತಿಗಳನ್ನು ನೀವು ಕಂಡಿದ್ದೀರಾ?


ನಿಮಗೆ ಪರಿಚಿತವಿರುವ ಇಂತಹ ಆಕೃತಿಗಳನ್ನು ಬರೆಯಿರಿ.

| ಆಯತ ಸ್ತಂಭ | ಗೋಲ |
|---|---|
| • | • |
| • | • |
| • | • |
| • | • |

## ಒಟ್ಟು ಎಷ್ಟು?




? ಚಿತ್ರದಲ್ಲಿ ಒಟ್ಟು ಎಷ್ಟು ಆಯತಗಳಿವೆ?



? ಚಿತ್ರದಲ್ಲಿ ಒಟ್ಟು ಎಷ್ಟು ತ್ರಿಕೋನಗಳಿವೆ?

## ಬೆಂಕಿ ಕಡ್ಡಿಗಳು




? ಬೆಂಕಿ ಕಡ್ಡಿಯಿಂದ ರಚಿಸಿದ ಮೊದಲ ಆಯತದಲ್ಲಿ ಎಷ್ಟು ಕಡ್ಡಿಗಳಿವೆ?

? ಎರಡನೇ ಆಕೃತಿಯಲ್ಲಿ ಎಷ್ಟು ಬೆಂಕಿ ಕಡ್ಡಿಗಳಿವೆ?

? ಹಾಗಿದ್ದರೆ ಇದೇ ರೀತಿ 3 ಆಯತಗಳು ಸೇರಿ ಬರುವ ಆಕೃತಿಯನ್ನು ರಚಿಸಲು ಎಷ್ಟು ಕಡ್ಡಿಗಳು ಬೇಕಾಗಬಹುದು?

## ಚೌಕಗಳು



? ಎಷ್ಟು ಚೌಕಗಳಿವೆ?


## ಸುತ್ತಳತೆ


10 ಸೆ.ಮೀ. ಅಳತೆಯ ಬದಿಗಳುಳ್ಳ ಒಂದು ಚೌಕದ ಸುತ್ತಳತೆ ಎಷ್ಟು?


ಈ ಚೌಕವನ್ನು ಮಧ್ಯದಲ್ಲಿ ತುಂಡರಿಸಿ ಎರಡು ಆಯತಗಳನ್ನು ಮಾಡಿದರೆ ಪ್ರತಿಯೊಂದು ಆಯತದ ಸುತ್ತಳತೆ ಎಷ್ಟು?


## ಬಣ್ಣ ಕೊಡುವ











## ಪುನರವಲೋಕನ




| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮಪಡಿಸ ಬೇಕಾಗಿದೆ |
|---|---|---|---|
| **ಪಾಠ 1 : ನಾಲ್ಕಂಕೆ ಸಂಖ್ಯೆಗಳೊಂದಿಗೆ** | | | |
| • ಒಂದು ನಿರ್ದಿಷ್ಟ ಸಂಖ್ಯೆಯಿಂದ ಆರಂಭಿಸಿ ಮುಂದುವರಿಸಿ ಬರೆಯುತ್ತಾರೆ ಹತ್ತು ಸಾವಿರದವರೆಗೆ | | | |
| • ನಾಲ್ಕಂಕೆ ಸಂಖ್ಯೆಗಳನ್ನು ಬರೆಯುವುದು ಮತ್ತು ಓದುವುದು. | | | |
| • ನಾಲ್ಕಂಕೆ ಸಂಖ್ಯೆಗಳನ್ನು ಸಂದರ್ಭೋಚಿತವಾಗಿ ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸುವುದು. | | | |
| • ನಾಲ್ಕಂಕೆ ಸಂಖ್ಯೆಗಳನ್ನು ಸ್ಥಾನಬೆಲೆಗನುಸಾರವಾಗಿ ವಿಂಗಡಿಸಿ ಮತ್ತು ವಿಸ್ತರಿಸಿ ಬರೆಯುವುದು. | | | |
| • ನಾಲ್ಕಂಕೆ ಸಂಖ್ಯೆಗಳನ್ನು ತುಲನೆ ಮಾಡಲಿರುವ ರೀತಿಯನ್ನು ವಿವರಿಸುವುದು. | | | |
| • ನಿರ್ದಿಷ್ಟ ಸಂಖ್ಯೆಯ ಅಂಕೆಗಳನ್ನು ಆವರ್ತಿಸಿಯೂ ಅಲ್ಲದೆಯೂ ಬರೆಯಬಹುದಾದ ಸಂಖ್ಯೆಗಳನ್ನು ಬರೆಯುವುದು. | | | |
| • ಸಂಖ್ಯಾ ಶ್ರೇಣಿಯ ಯುಕ್ತಿಯನ್ನು ಕಂಡುಕೊಂಡು ವಿವರಿಸುವುದು. | | | |
| • ನಾಲ್ಕಂಕೆ ಸಂಖ್ಯೆಗಳನ್ನು ಒಳಗೊಂಡ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸುವುದು. | | | |
| **ಪಾಠ : ಸಮಯ ಚಕ್ರ** | | | |
| • ಮಿನಿಟಿಗೆ ಸೆಕುಂಡು ಮತ್ತು ಗಂಟೆಯೊಂದಿಗಿರುವ ಸಂಬಂಧವನ್ನು ವಿವರಿಸುವುದು. | | | |
| • ಗಡಿಯಾರ/ ವಾಚ್ ನೋಡಿ ಸಮಯವನ್ನು ಲೆಕ್ಕ ಹಾಕುವುದು. | | | |
| • 24 ಗಂಟೆಯ ಗಡಿಯಾರದಲ್ಲಿ ನೀಡಿರುವ ಸಮಯವನ್ನು 12 ಗಂಟೆಯ ಗಡಿಯಾರದಲ್ಲಿಯೂ ತಿರುಗಿಸಿಯೂ ಬದಲಿಸಿ ಹೇಳುವುದು. | | | |
| • ಸಮಯವನ್ನು am/pm ಉಪಯೋಗಿಸಿ ಹೇಳುವುದು. | | | |
| • ಸಮಯಕ್ಕೆ ಸಂಬಂಧಿಸಿದ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸುವುದು. | | | |
| • ಸಮಯ ಮಾಹಿತಿ ಪಟ್ಟಿಯನ್ನು ವಿಶ್ಲೇಷಿಸಿ ತೀರ್ಮಾನಕ್ಕೆ ತಲುಪುವುದು. | | | |
| • ಸಮಾಯಾವಧಿಯನ್ನು ಊಹಿಸಿ ಹೇಳುವುದು. | | | |
| • ಇಂಗ್ಲೀಷ್ ತಿಂಗಳ ದಿವಸ/ತಿಂಗಳು/ವರ್ಷ ಎಂಬ ಕ್ರಮದಲ್ಲಿ ದಾಖಲಿಸುವುದು. | | | |
| • ಕ್ಯಾಲೆಂಡರ್ ನೋಡಿ ಇಂಗ್ಲೀಷ್ ತಿಂಗಳ ದಿನಾಂಕಗಳೊಂದಿಗೆ ಶಕವರ್ಷ, ಕೊಲ್ಲವರ್ಷ, ಹಿಜಿರ ವರ್ಷ, ದಿನಾಂಕಗಳನ್ನು ಕಂಡುಕೊಂಡು ಬರೆಯುವುದು. | | | |
| • ಸಮಯ ರೇಖೆ ತಯಾರಿಸುವುದು. | | | |

| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮಪಡಿಸ ಬೇಕಾಗಿದೆ |
|---|---|---|---|
| **ಪಾಠ 3 : ಸಾವಿರಗಳು ಸೇರುವಾಗ**<br>• ಸಂಕಲನ ಕ್ರಿಯೆಗಳನ್ನೊಳಗೊಂಡ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸುವುದು.<br>• ಸಮಸ್ಯಾ ಪರಿಹಾರ ರೀತಿಗಳನ್ನು ವಿವರಿಸುವುದು.<br>• ಉತ್ತರವನ್ನು ಬಾಯಿಲೆಕ್ಕವಾಗಿ ಹೇಳುವುದು.<br>• ಸಮಸ್ಯಾ ಪರಿಹಾರಕ್ಕಾಗಿ ದತ್ತಾಂಶಗಳನ್ನು ಪಟ್ಟಿ ಮಾಡುವುದು.<br>• ಸಂಖ್ಯಾ ಶ್ರೇಣಿಗಳ ಯುಕ್ತಿಯನ್ನು ವಿವರಿಸುವುದು.<br>• ಉತ್ತರವನ್ನು ದೃಢತೆಯಿಂದ ಹೇಳುವುದು. | | | |
| **ಪಾಠ 4 : ಹೆಚ್ಚು ಮತ್ತು ಕಡಿಮೆ**<br>• ವ್ಯವಕಲನ ಕ್ರಿಯೆಗಳನ್ನೊಳಗೊಂಡ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸುವುದು.<br>• ಸಮಸ್ಯಾ ಪರಿಹಾರ ರೀತಿಗಳನ್ನು ವಿವರಿಸುವುದು.<br>• ಉತ್ತರವು ಸರಿಯಾಗಿದೆಯೋ ಎಂದು ಪರಿಶೀಲಿಸಲಿರುವ ಮಾರ್ಗವನ್ನು ವಿವರಿಸುವುದು.<br>• ಉತ್ತರವನ್ನು ಬಾಯಿಲೆಕ್ಕವಾಗಿ ಹೇಳುವುದು.<br>• ಸಮಸ್ಯಾ ಪರಿಹಾರಕ್ಕಾಗಿ ದತ್ತಾಂಶಗಳನ್ನು ಪಟ್ಟಿಮಾಡುವುದು.<br>• ಸಂಖ್ಯಾ ಶ್ರೇಣಿಗಳ ಯುಕ್ತಿಯನ್ನು ಸಮರ್ಥಿಸುವುದು.<br>• ಉತ್ತರವನ್ನು ದೃಢತೆಯಿಂದ ಹೇಳುವುದು. | | | |
| **ಪಾಠ 5 : ಆಕೃತಿಗಳನ್ನು ರಚಿಸೋಣ**<br>• ಸುತ್ತುಮುತ್ತಲಿನಿಂದ ಆಯತ, ತ್ರಿಕೋನ, ಉರುಟು ಎಂಬೀ ಆಕೃತಿಗಳನ್ನು ಪ್ರತ್ಯೇಕಿಸಿ ತಿಳಿಯುವುದು.<br>• ಉರುಟಾದ ವಸ್ತುಗಳನ್ನು ಉಪಯೋಗಿಸಿ ವೃತ್ತವನ್ನು ರಚಿಸುವುದು.<br>• ನಿರ್ದಿಷ್ಟ ಅಳತೆಯಿಲ್ಲದ ಆಯತ ಮತ್ತು ತ್ರಿಕೋನವನ್ನು ರಚಿಸುವುದು.<br>• ತ್ರಿಕೋನ, ಆಯತ, ಚೌಕ ಎಂಬಿವುಗಳ ಸುತ್ತಳತೆಯನ್ನು ನಿಖರತೆಯೊಂದಿಗೆ ಲೆಕ್ಕಮಾಡುವ ರೀತಿಯನ್ನು ವಿವರಿಸುವುದು.<br>• ಆಯತದ ಸುತ್ತಳತೆಯನ್ನು ಊಹಿಸಿ ಹೇಳುವುದು.<br>• ಒಂದೇ ಸುತ್ತಳತೆಯ ವಿಭಿನ್ನ ಉದ್ದ ಮತ್ತು ಅಗಲವಿರುವ ಆಯತಗಳ ಅಳತೆಗಳನ್ನು ಕಂಡುಹಿಡಿದು ವಿವರಿಸುವುದು..<br>• ಸುತ್ತುಮುತ್ತಲಿರುವ ಜ್ಯಾಮಿತೀಯ ನಮೂನೆಗಳನ್ನು ಕಂಡುಕೊಳ್ಳುವುದು.<br>• ಜ್ಯಾಮಿತಿಯ ಆಕೃತಿಗಳನ್ನು ಅಂದವಾಗಿ ರಚಿಸುವುದು.<br>• ತ್ರಿಮಾನ ಚಿತ್ರಗಳನ್ನು ಆಕೃತಿಗಳಿಗನುಸಾರವಾಗಿ ವರ್ಗೀಕರಿಸುವುದು. | | | |